ನವಸಾಕ್ಷರ ಪುಸ್ತಕ ಮಾಲೆ ೪೨

ಕೃಷಿ ಮಾರುಕಟ್ಟೆ

ದಾಕ್ಷಾಯಿಣಿ



ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ನವಸಾಕ್ಷರ ಪುಸ್ತಕ ಮಾಲೆ

ಲೋಕಶಿಕ್ಷಣ ನಿರ್ದೇಶನಾಲಯ
ನವಸಾಕ್ಷರ ಪುಸ್ತಕ ಮಾಲೆ-೪೨

ಕೃಷಿ ಮಾರುಕಟ್ಟೆ

ದಾಕ್ಷಾಯಿಣಿ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ-೫೮೩ ೨೭೬

KRISHI MARUKATTE ; by DAKSHAYINI. Published by The Director of Prasaranga, Kannada University, Hampi - 583 211, KARNATAKA.
First Impression 1994, Pp. ii + 26, Rs. 8.00

ಸಂಯೋಜನಾಧಿಕಾರಿ
ಡಾ॥ ಎಚ್. ಎಸ್. ಶ್ರೀಮತಿ
ಪಠ್ಯಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಕಾಳಿ

ಬೆಲೆ : ರೂ ೮.೦೦

ಮುದ್ರಕರು
ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್
೩/೩, ಒಂದನೇ ಮುಖ್ಯರಸ್ತೆ,
ಹೊಸ ತರಗುಪೇಟೆ,
ಬೆಂಗಳೂರು ೫೬೦ ೦೦೨

ಕೃಷಿ ಮಾರುಕಟ್ಟೆ

ಮಾರುಕಟ್ಟೆಯಲ್ಲಿ ಹಲವು ವಿಧಗಳಿವೆ. ಅಂದರೆ ಅದನ್ನು ಬೇರೆ ಬೇರೆ ವಿಧದ ಮಾರುಕಟ್ಟೆಯಾಗಿ ವಿಂಗಡಿಸಬಹುದು. ಉದಾಹರಣೆಗೆ ಕೃಷಿಮಾರುಕಟ್ಟೆ, ಶ್ರಮದ ಮಾರುಕಟ್ಟೆ, ಹಣದ ಮಾರುಕಟ್ಟೆ, ವಿದೇಶಿ ಮಾರುಕಟ್ಟೆ ಇತ್ಯಾದಿ. ಒಂದು ಹಳ್ಳಿಯಲ್ಲಿ ಅಥವಾ ಒಂದು ನಗರದಲ್ಲಿ ನೆಲೆಗೊಂಡಿರುವುದು ಸ್ಥಳೀಯ ಮಾರುಕಟ್ಟೆ.

ಉದಾಹರಣೆಗೆ ಕಲ್ಲಳ್ಳಿಯ ಸಂತೆಯು ಸ್ಥಳೀಯ ಮಾರುಕಟ್ಟೆ. ದೇಶದ ತುಂಬಾ ಹರಡಿಕೊಂಡಿರುವುದು ದೇಶೀಯ ಮಾರುಕಟ್ಟೆ. ಒಂದು ದೇಶ ಮತ್ತು ಇನ್ನೊಂದು ದೇಶದ ನಡುವೆ ನಡೆಯುವ ವ್ಯಾಪಾರ ಅಂತಾರಾಷ್ಟ್ರೀಯ ಮಾರುಕಟ್ಟೆ ಅಥವಾ ವಿದೇಶಿ ಮಾರುಕಟ್ಟೆ. ಅಪಾರ ಸಂಖ್ಯೆಯಲ್ಲಿ ಮಾರಾಟಗಾರರಿದ್ದರೆ ಅದು ಪೈಪೋಟಿ ಮಾರುಕಟ್ಟೆ. ಒಬ್ಬನೇ ಮಾರಾಟಗಾರನಿದ್ದರೆ ಏಕ ವ್ಯಕ್ತಿ ಮಾರುಕಟ್ಟೆ, ಕೂಲಿಕಾರರನ್ನು ಕೆಲಸಕ್ಕೆ ನೇಮಿಸಿಕೊಳ್ಳುವುದು ಶ್ರಮದ ಮಾರುಕಟ್ಟೆ. ಹಣವನ್ನು ಸಾಲಕೊಡುವುದು, ಒತ್ತೆಇಟ್ಟುಕೊಳ್ಳುವುದು ಹಣದ ಮಾರುಕಟ್ಟೆ. ಒಂದು ದಿನ ಅಥವಾ ಎರಡು ದಿನ

ವ್ಯವಹಾರ ನಡೆಯುವುದು ಅಲ್ಪ ಮಾರುಕಟ್ಟೆ. ತಿಂಗಳುಗಟ್ಟಲೆ ವಹಿವಾಟು ನಡೆಯುವ ಮಾರುಕಟ್ಟೆಯನ್ನು ದೀರ್ಘ ಅವಧಿ ಮಾರುಕಟ್ಟೆ ಎನ್ನಬಹುದು.

ಕೃಷಿ ಮಾರುಕಟ್ಟೆ

ಭಾರತವು ಮುಖ್ಯವಾಗಿ ವ್ಯವಸಾಯ ದೇಶ. ವ್ಯವಸಾಯವೇ ನಮ್ಮ ಜನರ ಮುಖ್ಯ ಕಸುಬು. ನಮ್ಮ ದೇಶದ ಬಹುಪಾಲು ಜನ ಬೇಸಾಯವನ್ನು ಅವಲಂಬಿಸಿದ್ದಾರೆ. ನಮ್ಮ ದೇಶದ ಒಟ್ಟು ವರಮಾನದಲ್ಲಿ ವ್ಯವಸಾಯರಂಗದ್ದು ಸಿಂಹಪಾಲು. ವ್ಯವಸಾಯವು ವೈವಿಧ್ಯಮಯವಾಗಿದೆ. ನೂರಾರು ಬಗೆಯ ಬೆಳೆಗಳನ್ನು ಬೆಳೆಯಲಾಗುತ್ತದೆ.

ಆಹಾರದ ಬೆಳೆಗಳು

ಜೋಳ, ಗೋಧಿ, ರಾಗಿ, ಸಜ್ಜೆ, ನವಣೆ, ಬತ್ತ, ಬೇಳೆಕಾಳು, ಸಾಸುವೆ ಇತ್ಯಾದಿಗಳು ಆಹಾರದ ಬೆಳೆಗಳು.

ಮಾರಾಟದ ಬೆಳೆಗಳು

ಹತ್ತಿ, ತಂಬಾಕು, ಕಬ್ಬು, ಸೆಣಬು, ಎಣ್ಣೆಕಾಳು ಮುಂತಾದುವು ಮಾರಾಟದ ಬೆಳೆಗಳು.

ತೋಟಗಾರಿಕೆಯ ಬೆಳೆಗಳು

ಕಾಫಿ, ಚಹ, ರಬ್ಬರ್, ಅಡಿಕೆ, ತೆಂಗು, ಮೆಣಸು ಮುಂತಾದುವು ತೋಟಗಾರಿಕೆಯ ಬೆಳೆಗಳು.

ಹಣ್ಣು, ಕಾಯಿ ಪಲ್ಯ

ಸೇಬು, ದಾಳಿಂಬೆ, ಕಿತ್ತಳೆ, ಬಾರಿ, ಬಾಳೆ, ದ್ರಾಕ್ಷಿ ಮುಂತಾದುವು ಹಣ್ಣುಗಳು. ನೂರಾರು ಬಗೆಯ ಸೊಪ್ಪು-ಕಾಯಿಪಲ್ಲೆಗಳೂ ಇವೆ.

ವ್ಯವಸಾಯದಂತೆ, ವ್ಯವಸಾಯ ಮಾರುಕಟ್ಟೆಯೂ ವಿಶೇಷವಾದುದಾಗಿದೆ. ಅದೊಂದು ಒಂದೇ ತೆರನಾದ ಮಾರುಕಟ್ಟೆಯಲ್ಲ. ಅದರಲ್ಲಿ ಸಗಟು ಮಾರುಕಟ್ಟೆ ಇದೆ. ದಲ್ಲಾಳಿಗಳಿದ್ದಾರೆ, ದಾಸ್ತಾನುಗಾರರಿದ್ದಾರೆ, ಕಿರಾಣಿ ಮಾರಾಟಗಾರರಿದ್ದಾರೆ, ಸಹಕಾರಿ ಮಾರುಕಟ್ಟೆ ಇದೆ, ನಿಯಂತ್ರಿತ ಮಾರುಕಟ್ಟೆ ಇದೆ.

ವಾಣಿಜ್ಯ ಕೃಷಿ

ಒಂದು ಕಾಲದಲ್ಲಿ ನಮ್ಮ ರೈತರು ಬೆಳೆಗಳನ್ನು ಮಾರುತ್ತಿರಲಿಲ್ಲ. ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ಮಾರಾಟ ಮಾಡಲಿಕ್ಕಾಗೇ ಬೆಳೆಗಳನ್ನು ಬೆಳೆಯುತ್ತಾರೆ. ಕೃಷಿಯಲ್ಲಿ ಇಂದು ಮಾರಾಟವಾಗದ ವಸ್ತುವೇ ಇಲ್ಲ. ಇಂದು ಜನರಿಗೆ ಹಣ ಬೇಕು. ಅವರಿಗೆ ನಗದು ಹಣ ಬೇಕು. ಬೆಳೆದದ್ದನ್ನು ಸ್ವಂತಕ್ಕೆ ಉಪಯೋಗಿಸಲೂ ಇಟ್ಟುಕೊಳ್ಳದೆ ಮಾರಿಬಿಡುತ್ತಾರೆ.

ಕೃಷಿಯಲ್ಲಿ ಇಂದು ಎಲ್ಲವನ್ನೂ ಲೆಕ್ಕಾಚಾರ ಮಾಡಲಾಗುತ್ತದೆ. ಇದನ್ನು ವಾಣಿಜ್ಯ ಕೃಷಿ ಎನ್ನುತ್ತಾರೆ. ಈ ಕೃಷಿಮಾರುಕಟ್ಟೆಯಲ್ಲಿ ಮಾರಾಟ ಹಾಗೂ ಖರೀದಿ ವಹಿವಾಟು ಒಂದೇ ತೆರನಾಗಿರುವುದಿಲ್ಲ. ಅಲ್ಲಿ ವಿವಿಧ ರೀತಿಯ ವ್ಯವಹಾರ ನಡೆಯುತ್ತದೆ. ಕಬ್ಬು ಬೆಳೆಯುವ ರೈತ ಕಬ್ಬನ್ನು ಸಕ್ಕರೆ ಕಾರ್ಖಾನೆಗೆ ಮಾರುತ್ತಾನೆ. ಹಾಲು ಹಿಂಡುವ ರೈತ ಅದನ್ನು ಡೈರಿಗೆ ಮಾರುತ್ತಾನೆ. ಕಾಫಿ ಬೆಳೆಯುವ ರೈತ ಕಾಫಿ ಬೀಜವನ್ನು ಕಾಫಿ ಮಂಡಳಿಗೆ ಮಾರುತ್ತಾನೆ. ಗೋಧಿ, ರಾಗಿ, ಜೋಳ, ಭತ್ತ ಮುಂತಾದವುಗಳನ್ನು ಕೃಷಿ ಉತ್ಪನ್ನಗಳ ಮಾರುಕಟ್ಟೆ ಸಮಿತಿಯಲ್ಲಿ ಮಾರಾಟ ಮಾಡುತ್ತಾರೆ. ಇದನ್ನು ಎ.ಪಿ.ಎಂ.ಸಿ. ಎನ್ನುತ್ತಾರೆ. ಕೆಲವು ಕಡೆ ಇದನ್ನು ಗಂಜ್ ಎನ್ನುತ್ತಾರೆ. ಇನ್ನೂ ಕೆಲವು ಭಾಗದಲ್ಲಿ ಮಂಡಿ ಎನ್ನುತ್ತಾರೆ. ಎ.ಪಿ.ಎಂ.ಸಿ. ಎನ್ನುವುದು ಚಲಾವಣೆಯಲ್ಲಿದೆ.

ಕೃಷಿಮಾರುಕಟ್ಟೆಯಲ್ಲಿ ವಿವಿಧ ರೀತಿಯ ಮಾರಾಟಗಾರರಿರುತ್ತಾರೆ. ವಿವಿಧ ಹಂತಗಳಲ್ಲಿ ವ್ಯಾಪಾರ-ವಹಿವಾಟು ನಡೆಯುತ್ತದೆ. ರೈತರು ಬೆಳೆ ಬೆಳೆಯುತ್ತಾರೆ. ಜನರು ದವಸ-ಧಾನ್ಯ ಕೊಳ್ಳುತ್ತಾರೆ. ಆದರೆ ರೈತ ಮತ್ತು ಆಹಾರ ಕೊಂಡುಕೊಳ್ಳುವ ಜನರ ನಡುವೆ

ಯಾವುದೇ ಸಂಬಂಧವಿಲ್ಲ. ಇವರಿಬ್ಬರದೂ ಎರಡು ಪ್ರತ್ಯೇಕ ಲೋಕ. ಇವರಿಬ್ಬರ ನಡುವೆ ದಲ್ಲಾಳಿಗಳಿದ್ದಾರೆ, ವಿತರಣೆ-ದಾಸ್ತಾನುದಾರರಿದ್ದಾರೆ, ಸಗಟು ಮಾರಾಟಗಾರರಿದ್ದಾರೆ, ಚಿಲ್ಲರೆ ಮಾರಾಟಗಾರರಿದ್ದಾರೆ. ಇವರನ್ನೆಲ್ಲಾ ಮಧ್ಯವರ್ತಿಗಳು ಎನ್ನುತ್ತಾರೆ. ರೈತರು ದುಡಿಯುತ್ತಾರೆ, ಜನರು ಹಣ ಕೊಟ್ಟು ಕೊಳ್ಳುತ್ತಾರೆ. ಇವರಿಬ್ಬರ ಮಧ್ಯೆ ವ್ಯಾಪಾರಿಗಳು ಲಾಭಮಾಡಿಕೊಳ್ಳುತ್ತಾರೆ.

ಮಧ್ಯವರ್ತಿಗಳು ಹೆಚ್ಚಿಗೆ ಇದ್ದರೆ ಅಲ್ಲಿ ಕೊಂಡುಕೊಳ್ಳುವವರಿಗೆ ಅನ್ಯಾಯವಾಗುತ್ತದೆ. ಮಧ್ಯವರ್ತಿಗಳಿಲ್ಲದ ಮಾರುಕಟ್ಟೆಯೇ ಒಳ್ಳೆಯ ಮಾರುಕಟ್ಟೆ. ಆದರೆ ಮಧ್ಯವರ್ತಿಗಳು-ದಲ್ಲಾಳಿಗಳು ಮಾರುಕಟ್ಟೆಯಲ್ಲಿ ಇದ್ದೇ ಇರುತ್ತಾರೆ. ಯಾರದೋ ಹಣ, ಯಾರದೋ ಬೆವರು, ಯಾರದೋ ದುಡಿಮೆ. ಆದರೆ ಅದರ ಫಲ ಮಾತ್ರ ಮಧ್ಯವರ್ತಿಗಳಿಗೆ.

ಕೃಷಿಮಾರುಕಟ್ಟೆಯ ಒಂದು ಮಾದರಿಯನ್ನು ಕೆಳಗಿನ ಚಿತ್ರದಲ್ಲಿ ತೋರಿಸಿದೆ

ರೈತ

↓

ದಲ್ಲಾಳಿ
ಎ.ಪಿ.ಎಂ.ಸಿ.
(ಗಂಜ್, ಮಂಡಿ, ಮಾರ್ಕೆಟ್ ಯಾರ್ಡ್)

↓

ವಿತರಣೆಗಾರ ದಾಸ್ತಾನುಗಾರ
(ರೈಸ್‌ಮಿಲ್ಲುಗಳು, ಹತ್ತಿ ಗಿರಣಿ, ರವೆ ಮಿಲ್ಲು ಇತ್ಯಾದಿ)

↓

ಸಗಟು ವ್ಯಾಪಾರಗಾರರು

↓

ಚಿಲ್ಲರೆ ವ್ಯಾಪಾರಗಾರರು
ಕಿರಾಣಿ ವ್ಯಾಪಾರ

↓

ಕೊಂಡುಕೊಳ್ಳುವ ಜನ

ಕೃಷಿಮಾರುಕಟ್ಟೆಯ ವಿವಿಧ ಹಂತಗಳನ್ನು ಈ ಚಿತ್ರ ತೋರಿಸುತ್ತದೆ. ಐದು ಹಂತಗಳಲ್ಲಿ ವ್ಯವಹಾರ ನಡೆಯುತ್ತದೆ. ಈ ಚಿತ್ರದ ಪ್ರಕಾರ ಬೆಳೆ ಬೆಳೆಯುವ ರೈತ ಒಂದು ಕೊನೆಯಲ್ಲಿದ್ದರೆ, ಬೆಳೆಗಳನ್ನು ಕೊಂಡುಕೊಳ್ಳುವ ಜನ ಇನ್ನೊಂದು ಕೊನೆಯಲ್ಲಿದ್ದಾರೆ.



ಚಿಲ್ಲರೆ ವ್ಯಾಪಾರಿಗಳಿಂದ ಗ್ರಾಹಕರಿಗೆ ವಸ್ತುಗಳ ಮಾರಾಟ

ಈ ಎರಡೂ ಕೊನೆಗಳ ನಡುವ ಮಧ್ಯವರ್ತಿಗಳಿದ್ದಾರೆ. ಅವರೇ ದಲ್ಲಾಳಿಗಳು, ವಿತರಣೆಗಾರರು, ಸಗಟು ಮಾರಾಟಗಾರರು, ಚಿಲ್ಲರೆ ಮಾರಾಟಗಾರರು.

ಕೃಷಿಮಾರುಕಟ್ಟೆಯಲ್ಲಿ ಬೆಲೆ ಹೇಗೆ ನಿಗದಿಯಾಗುತ್ತದೆ.

ರೈತ ನೇರವಾಗಿ ಜನರಿಗೆ ಆಹಾರ ವಸ್ತುಗಳನ್ನು ಮಾರುವುದಿಲ್ಲ. ರೈತರು ವ್ಯಾಪಾರಗಾರರಿಗೆ ಕಾಳು-ಬೇಳೆಗಳನ್ನು ಮಾರುತ್ತಾರೆ. ರೈತ-ದಲ್ಲಾಳಿ-ಸಗಟು ವ್ಯಾಪಾರಿ-ಚಿಲ್ಲರೆ ವ್ಯಾಪಾರಿ-ಕೊಂಡುಕೊಳ್ಳುವ ಜನ ಹೀಗೆ ಪರಸ್ಪರ ಸಂಬಂಧವಿರುತ್ತದೆ.

ರೈತರು ತಾವು ಬೆಳೆದ ಬೆಳೆಗಳನ್ನು ಎ.ಪಿ.ಎಂ.ಸಿ.ಗೆ ತರುತ್ತಾರೆ. ಈ ಮಂಡಿ ಅಥವಾ ಗಂಜ್‌ಗಳಲ್ಲಿ ದಲ್ಲಾಳಿಗಳಿರುತ್ತಾರೆ. ಇವು ಸಾಮಾನ್ಯವಾಗಿ ತಾಲ್ಲೂಕು ಕೇಂದ್ರಗಳಲ್ಲಿರುತ್ತವೆ. ಅಲ್ಲಿಗೆ ಮಾಲನ್ನು ಚಕ್ಕಡಿ ಅಥವಾ ಟ್ರಾಕ್ಟರ್‌ಗಳಲ್ಲಿ ತುಂಬಿಕೊಂಡು ಬರುತ್ತಾರೆ. ಹೀಗೆ ತಂದ ಮಾಲನ್ನು ಮಾರಾಟಕ್ಕೆ ಇಡುತ್ತಾರೆ. ದಲ್ಲಾಳಿಗಳು ಮಾಲನ್ನು ಪರೀಕ್ಷಿಸುತ್ತಾರೆ. ಇಲ್ಲಿ ಬೆಲೆಯು ಬಹಿರಂಗ ಹರಾಜಿನ ಮೂಲಕ ನಿಗದಿಯಾಗುತ್ತದೆ. ಎ.ಪಿ.ಎಂ.ಸಿ.ಯಲ್ಲಿ ಹರಾಜು ನಡೆಸಲು ಒಂದು ಸಮಿತಿ ಇರುತ್ತದೆ. ಯಾವ ದಲ್ಲಾಳಿ ಅತಿ ಹೆಚ್ಚು ಬೆಲೆಯಲ್ಲಿ ಹರಾಜು ಕೂಗುತ್ತಾನೋ ಅವನಿಗೆ ಮಾಲು ದೊರೆಯುತ್ತದೆ.

ಹರಾಜು ಮುಗಿದ ತಕ್ಷಣ ಕೆಲಸ ಮುಗಿಯಲಿಲ್ಲ. ಹರಾಜಿನಲ್ಲಿ ಕೇವಲ ಬೆಲೆ ನಿಗದಿಯಾಗುತ್ತದೆ. ಹರಾಜು ಮುಗಿದ ಮೇಲೆ ಯಾವ ದಲ್ಲಾಳಿಗೆ ಮಾಲು ದೊರೆಯಿತೋ ಅವನ ಮಳಿಗೆ ಹತ್ತಿರ ಮಾಲನ್ನು ಸಾಗಿಸಬೇಕು. ಅಲ್ಲಿ ಮಾಲಿನ ತೂಕ ನಡೆಯುತ್ತದೆ. ತೂಕ ಮಾಡಲು ಮಂಡಿಯಲ್ಲಿ ವಿಶೇಷ ಜನರಿರುತ್ತಾರೆ. ಮಾಲನ್ನು ಚಕ್ಕಡಿಯಿಂದ ಮಳಿಗೆಗೆ ಸಾಗಿಸಿದ್ದಕ್ಕೆ ತೂಕ ಮಾಡಿದ್ದಕ್ಕೆ ಹಮಾಲಿ-ಕೂಲಿಯನ್ನು ರೈತರೇ ಕೊಡಬೇಕು.

ಹೀಗೆ ತೂಕ ಮುಗಿದ ಮೇಲೆ, ಬೆಲೆ ನಿಗದಿಯಾದ ಮೇಲೆ ಹಣ ಲೆಕ್ಕಾಚಾರವಾಗಬೇಕು. ಇಲ್ಲಿ ತೂಕ, ಹಮಾಲಿ ಬಾಬ್ತು ಚೀಲಕ್ಕೆ ಇಷ್ಟು ಕೆ.ಜಿ.ಎಂದು ಕಳೆಯುತ್ತಾರೆ. ನಂತರ ಕಾಳಿನಲ್ಲಿ ಕಸ-ಕಡ್ಡಿ ಬೆರೆತಿವೆ ಎಂದು ಚೀಲಕ್ಕೆ ಇಷ್ಟು ಕೆ.ಜಿ.ಎಂದು ಕಳೆಯುತ್ತಾರೆ. ಇವೆಲ್ಲಾ ಮುಗಿದ ಮೇಲೆ ಒಟ್ಟು ಮೊತ್ತ ಲೆಕ್ಕ ಹಾಕುತ್ತಾರೆ. ಹೀಗೆ ಬಂದ ಒಟ್ಟು ಮೊತ್ತದಲ್ಲಿ ದಲ್ಲಾಳಿಯು ತನ್ನ ದಲ್ಲಾಳಿಯನ್ನು ಅಂದರೆ ಕಮೀಷನ್ ಮುರಿದುಕೊಂಡು ಉಳಿದ ಹಣ ರೈತನಿಗೆ ನೀಡುತ್ತಾನೆ.

ಈ ಲೆಕ್ಕಾಚಾರ, ಕಮಿದಷನ್, ಕಡಿತಗಳೆಲ್ಲಾ ಅರ್ಥವಾಗಬೇಕಾದರೆ ರೈತರು ಓದು-ಬರಹ ತಿಳಿದಿರಬೇಕು. ಇಲ್ಲದಿದ್ದರೆ ಅವರು ಮೋಸಬೀಳುತ್ತಾರೆ.

ಕಲ್ಲಳ್ಳಿಯ ಹುಲಗಪ್ಪ ಒಬ್ಬ ರೈತ. ಅವನು ಜೋಳ ಬೆಳೆದಿದ್ದಾನೆ. ಈ ಸಾಲಿನಲ್ಲಿ ಐದು ಚೀಲ ಜೋಳ ಮಾರಲು ಮಂಡಿಗೆ ತರುತ್ತಾನೆ. ತನ್ನದೇ ಚಕ್ಕಡಿಯಲ್ಲಿ ಹೇರಿಕೊಂಡು ಬಂದಿದ್ದಾನೆ. ಮಂಡಿಯ ಹರಾಜಿನಲ್ಲಿ ಹುಲಗಪ್ಪನ ಜೋಳದ ಬೆಲೆ

ಹರಾಜಿನಲ್ಲಿ ಚೀಲಕ್ಕೆ ಇನ್ನೂರ ಐವತ್ತು ರೂಪಾಯಿಯಂತೆ ನಿಗದಿಯಾಗುತ್ತದೆ. ಒಂದು ಭರ್ತಿ ಚೀಲ ಎಂದರೆ ನೂರು ಕೆ.ಜಿ ನೂರು ಕೆ.ಜಿ ಜೋಳದ ಚೀಲಕ್ಕೆ ಇನ್ನೂರ ಐವತ್ತು ರೂಪಾಯಿ - ಹಾಗಾದರೆ ಕೆ.ಜಿ.ಗೆ ಎಷ್ಟು ಬೆಲೆ?

ಕೆ.ಜಿ.ಗೆ ಎರಡೂವರೆ ರೂಪಾಯಿ ಬೆಲೆಯಾಗುತ್ತದೆ.

ಐದು ಚೀಲ ಜೋಳ ತೂಗಲು ಹಮಾಲಿ: ದಲ್ಲಾಳಿ ಅಂಗಡಿಯಲ್ಲಿ ಜೋಳ ತೂಗಲು ಹಮಾಲಿ ಚೀಲಕ್ಕೆ ಒಂದು ಕೆ.ಜಿ ಜೋಳ. ಇದು ತೂಕ ಮಾಡುವ, ಚಕ್ಕಡಿಯಿಂದ ಚೀಲ ಇಳಿಸುವ ಹಮಾಲರಿಗೆ ಹೋಗುತ್ತದೆ. ಇದನ್ನು ರೈತರು ಕೊಡಬೇಕು. ವ್ಯಾಪಾರಿ ಕೊಡುವುದಿಲ್ಲ.

ಕಾಳಿನಲ್ಲಿ ಕಸ-ಕಡ್ಡಿ ಬಾಬ್ತು ಕಡಿತ: ಜೋಳದ ಚೀಲದಲ್ಲಿ ಕಸ-ಕಡ್ಡಿ ಇರುತ್ತದೆ, ಅವನ್ನೆಲ್ಲಾ ತೆಗೆದ ಮೇಲೆ ತೂಕ ನನಗೆ ಕಡಿಮೆ ಬರುತ್ತದೆ, ನನಗೆ ನಷ್ಟವಾಗುತ್ತದೆ ಎಂದು ವ್ಯಾಪಾರಿಯ ವಾದ. ಇದಕ್ಕಾಗಿ ಚೀಲಕ್ಕೆ ಒಂದು ಕೆ.ಜಿ. ಕಡಿತ ಮಾಡಿಕೊಳ್ಳುತ್ತಾನೆ.

ಹುಲಗಪ್ಪನಿಗೆ ಸಿಕ್ಕ ತೂಕವೆಷ್ಟು?: ಹುಲಗಪ್ಪ ಮಂಡಿಗೆ ತಂದ ಮಾಲು ಐದು ಚೀಲ ಜೋಳ. ಇದರಲ್ಲಿ ಹಮಾಲಿ ಕಡಿತ ಹೋದಮೇಲೆ ಉಳಿದ ತೂಕ ನಾಲ್ಕುನೂರಾ ಎಂಭತ್ತು ಕೆ.ಜಿ. ಒಂದು ಕೆ.ಜಿ.ಗೆ ಎರಡೂವರೆಯಂತೆ ನಾಲ್ಕುನೂರಾ ಎಂಭತ್ತು ಕೆ.ಜಿ. ಜೋಳಕ್ಕೆ ಬೆಲೆ ಎಷ್ಟು?

ಹುಲಗಪ್ಪನ ಜೋಳದ ಬೆಲೆ ಕೊನೆಗೆ ಒಂದು ಸಾವಿರದ ಇನ್ನೂರು ರೂಪಾಯಿಯಾಗುತ್ತದೆ.

ಕಮೀಷನ್ ಎಷ್ಟು?

ಹುಲಗಪ್ಪನಿಗೆ ಒಂದುಸಾವಿರದ ಇನ್ನೂರು ರೂಪಾಯಿ ಸಿಗುವುದಿಲ್ಲ. ಏಕೆಂದರೆ ಇದರಲ್ಲಿ ದಲ್ಲಾಳಿ ಮುರಿದುಕೊಳ್ಳಬೇಕು. ದಲ್ಲಾಳಿ ಎಷ್ಟು? ದಲ್ಲಾಳಿಯು ಒಂದು ನೂರು



ಸಿದ್ಧವಸ್ತುಗಳು ತಯಾರಿಕೆದಾರರಿಂದ ನೇರವಾಗಿ ಗ್ರಾಹಕರಿಗೆ ತಲಪಬೇಕು

ರೂಪಾಯಿಗೆ ಎರಡು ರೂಪಾಯಿ. ಅಂದರೆ ದಲ್ಲಾಳಿಯು ಶೇಕಡ ಎರಡು. ಹುಲಗಪ್ಪ ನೀಡಬೇಕಾದ ದಲ್ಲಾಳಿ ಇಪ್ಪತ್ತಾರು ರೂಪಾಯಿ. ಕೊನೆಗೆ ಹುಲಗಪ್ಪಗೆ ಜೋಳದ ಬಾಬ್ತು ಬಂದ ಹಣ ಒಂದು ಸಾವಿರದ ಒಂದು ನೂರಾ ಎಪ್ಪತ್ತಾರು ರೂಪಾಯಿ.

ಹುಲಗಪ್ಪನಿಂದ ಕೊಂಡ ಜೋಳ ದಲ್ಲಾಳಿಗಳ ಹತ್ತಿರವೇ ಉಳಿಯುವುದಿಲ್ಲ. ಏಕೆಂದರೆ ಅವನೊಬ್ಬ ವ್ಯಾಪಾರಿ. ದಲ್ಲಾಳಿಯು ಜೋಳವನ್ನು ದಾಸ್ತಾನುದಾರನಿಗೆ ಮಾರುತ್ತಾನೆ. ಅವನು ಸಗಟು ವ್ಯಾಪಾರಿಗೆ ಮಾರುತ್ತಾನೆ. ಅವನು ಚಿಲ್ಲರೆ ವ್ಯಾಪಾರಿಗೆ ಮಾರುತ್ತಾನೆ. ಅವನು ಜೋಳವನ್ನು ಜನರಿಗೆ ಮಾರುತ್ತಾನೆ.

ಹುಲಗಪ್ಪನಿಗೆ ಸಿಕ್ಕಬೆಲೆ ಕೆ.ಜಿ.ಗೆ ಎರಡೂವರೆ ರೂಪಾಯಿ. ದಲ್ಲಾಳಿಯು ಜೋಳವನ್ನು ಚೀಲಕ್ಕೆ ಇನ್ನೂರ ಅರವತ್ತು ರೂಪಾಯಿಗೆ ದಾಸ್ತಾನುದಾರರಿಗೆ ಮಾರುತ್ತಾನೆ. ದಾಸ್ತಾನುದಾರನು ಅದೇ ಜೋಳವನ್ನು ಚೀಲಕ್ಕೆ ಇನ್ನೂರ ಎಪ್ಪತ್ತೈದರಂತೆ ಸಗಟು ವ್ಯಾಪಾರಿಗಳಿಗೆ ಮಾರುತ್ತಾನೆ. ಸಗಟು ವ್ಯಾಪಾರಿಯು ಅದನ್ನು ಇನ್ನೂರ ತೊಂಬತ್ತು ರೂಪಾಯಿಗೆ ಮಾರುತ್ತಾನೆ. ಚಿಲ್ಲರೆ ವ್ಯಾಪಾರಿಯು ತಾನು ಕೊಂಡ ಜೋಳವನ್ನು ಮೂರುನೂರು ರೂಪಾಯಿಯಂತೆ ಮಾರುತ್ತಾನೆ.

ಯಾರಿಗೆ ಎಷ್ಟು ಲಾಭ?

ಹುಲಗಪ್ಪ ರೈತ. ಅವನ ಜೋಳಕ್ಕೆ ಸಿಕ್ಕ ಬೆಲೆ ಚೀಲಕ್ಕೆ ಇನ್ನೂರ ಐವತ್ತು ರೂಪಾಯಿ. ಆದರೆ ಜೋಳ ಬಳಸುವ ಜನರಿಗೆ ಬಿದ್ದ ಬೆಲೆ ಎಷ್ಟು? ಚೀಲ ಜೋಳಕ್ಕೆ ಮೂರುನೂರು ರೂಪಾಯಿ. ಇವೆರಡೂ ಬೆಲೆಯ ವ್ಯತ್ಯಾಸ ಐವತ್ತು ರೂಪಾಯಿ. ಅದು ಎಲ್ಲಿಗೆ ಹೋಯಿತು? ದಲ್ಲಾಳಿಗಳು, ದಾಸ್ತಾನುದಾರರು, ಸಗಟು ವ್ಯಾಪಾರಗಾರರು, ಚಿಲ್ಲರೆ ವ್ಯಾಪಾರಿಗಳು ಈ ಐವತ್ತು ರೂಪಾಯಿ ಲಾಭಗಳಿಸುತ್ತಾರೆ.

ರೈತನ ದುಡಿತ, ಕೊಂಡುಕೊಳ್ಳುವವರ ಹಣ, ಲಾಭ ಮಾತ್ರ ವ್ಯಾಪಾರಿಗಳಿಗೆ



ತಿಪ್ಪಯ್ಯ ಸಾಹುಕಾರರಿಂದ ಬಡ್ಡಿಗೆ ಸಾಲಪಡೆಯುತ್ತಿರುವುದು

ಇದು ಕೃಷಿ ಮಾರುಕಟ್ಟೆ ವ್ಯವಹಾರ. ಯಾರದೋ ಬೆವರು! ಯಾರದೋ ಹಣ! ಯಾರಿಗೋ ಲಾಭ.

ಕೃಷಿ ಮಾರುಕಟ್ಟೆ ಒಳಸುಳಿಗಳು

ಕಲ್ಲಳ್ಳಿಯಲ್ಲಿ ತಿಪ್ಪಯ್ಯನೆಂಬ ಸಣ್ಣ ರೈತನಿದ್ದಾನೆ. ಅವನಿಗೆ ಎರಡು ಎಕರೆ ಜಮೀನಿದೆ. ಅವನೊಬ್ಬ ಬಡರೈತ. ಅವನ ಬಳಿ ಬಂಡವಾಳವಿಲ್ಲ. ಪ್ರತಿ ಸಾರಿಯೂ ಬಿತ್ತನೆಯ ಕಾಲದಲ್ಲಿ ರಸಗೊಬ್ಬರ, ಬೀಜ, ಕೀಟನಾಶಕ, ಹಗ್ಗ, ಕುಳ ಮುಂತಾದ ವಸ್ತುಗಳಿಗಾಗಿ ಹಣ ಬೇಕು. ಅವನ ಬಳಿ ಒಂದು ಜೋಡಿ ಎತ್ತುಗಳಿದ್ದಾವೆ. ಅದರಲ್ಲಿ ಒಂದು ಮುದಿ ಎತ್ತು. ಅದನ್ನು ಬದಲಾಯಿಸಬೇಕು. ಇದಕ್ಕೆಲ್ಲಾ ಹಣಬೇಕು. ತಿಪ್ಪಯ್ಯನ ಹತ್ತಿರ ಹಣವಿಲ್ಲ.

ತಿಪ್ಪಯ್ಯನು ಎಲ್ಲಿ ಹಣ ಕೂಡಿಸುತ್ತಾನೆ: ಕಲ್ಲಳ್ಳಿಯಲ್ಲಿ ಶ್ರೀನಿವಾಸರಾಯನೆಂಬ ಲೇವಾದೇವಿಗಾರನಿದ್ದಾನೆ. ಅವನೊಬ್ಬ ದಲ್ಲಾಳಿಯೂ ಹೌದು. ವ್ಯಾಪಾರ ಮತ್ತು ಲೇವಾದೇವಿಗಳೆರಡನ್ನೂ ಅವನು ಕೂಡಿಸಿದ್ದಾನೆ. ವ್ಯಾಪಾರದಿಂದ ಅವನು ಲಾಭಗಳಿಸುತ್ತಾನೆ. ಲೇವಾದೇವಿಯಿಂದ ಬಡ್ಡಿಗಳಿಸುತ್ತಾನೆ. ಹೀಗೆ ಭಾರತದ ಹಳ್ಳಿ ಪ್ರದೇಶದಲ್ಲಿ ವ್ಯಾಪಾರ-ಬಡ್ಡಿ ವ್ಯವಹಾರಗಳು ಬೆರೆತುಕೊಂಡುಬಿಟ್ಟಿವೆ. ಈ ರೀತಿಯ ಬೆರಕೆಯನ್ನೇ ನಾವು 'ಕೃಷಿ ಮಾರುಕಟ್ಟೆಯ ಒಳಸುಳಿ' ಎನ್ನುವುದು.

ದವಸ-ಧಾನ್ಯದ ವ್ಯಾಪಾರ ವ್ಯವಹಾರವು ಬಡ್ಡಿ ವ್ಯವಹಾರದೊಂದಿಗೆ ಬೆರೆತುಕೊಂಡುಬಿಟ್ಟಿದೆ. ಈ ಒಳಸುಳಿಯಿಂದಾಗಿ ದಲ್ಲಾಳಿ ವ್ಯಾಪಾರಗಾರರಿಗೆ ಮಾರುಕಟ್ಟೆಯ ಮೇಲೆ ಪೂರ್ಣ ಹತೋಟಿ ಇದೆ. ಆದರೆ ರೈತರು ಈ ಒಳಸುಳಿಗೆ ಸಿಕ್ಕು ಕಂಗಾಲಾಗುತ್ತಾರೆ. ರೈತರಿಗೆ ಮಾರುಕಟ್ಟೆಯ ಮೇಲೆ ಹತೋಟಿಯಿಲ್ಲ. ತಿಪ್ಪಯ್ಯನಂತಹ ಸಣ್ಣರೈತರು ಈ ಒಳಸುಳಿಗೆ ಬಲಿಯಾಗುತ್ತಾರೆ.

ತಿಪ್ಪಯ್ಯನು ಬಿತ್ತನೆ ಕಾಲದಲ್ಲಿ ಶ್ರೀನಿವಾಸರಾಯನಿಂದ ಐದುನೂರು ರೂಪಾಯಿ ಸಾಲ ತಂದಿದ್ದಾನೆ. ಇದು ಬಡ್ಡಿ ಸಾಲ. ನೂರು ರೂಪಾಯಿಗೆ ತಿಂಗಳಿಗೆ ಎರಡು ರೂಪಾಯಿ ಬಡ್ಡಿ. ಅಂದರೆ, ಐದುನೂರು ರೂಪಾಯಿಗೆ ತಿಂಗಳಿಗೆ ಬಡ್ಡಿ ಹತ್ತುರೂಪಾಯಿಗಳು.

ಸಾಲದ ಶರತ್ತುಗಳೇನು ?

ಸಾಲ ಕೊಡುವಾಗ ಶ್ರೀನಿವಾಸರಾಯನು ತಿಪ್ಪಯ್ಯನಿಗೆ ಕೆಲವು ಶರತ್ತು ಹಾಕಿದ್ದಾನೆ.

೧. ಸುಗ್ಗಿಯಲ್ಲಿ ಸಾಲವನ್ನು ವಾಪಸ್ಸು ಮಾಡಬೇಕು.

೨. ಬೆಳೆದ ಮಾಲನ್ನು ಶ್ರೀನಿವಾಸರಾಯನಿಗೇ ಮಾರಬೇಕು.

೩. ಮಾರಾಟದ ಕಮಿಷನ್ ನಾಲ್ಕು ರೂಪಾಯಿ.

ಈ ಎಲ್ಲಾ ಶರತ್ತುಗಳನ್ನು ತಿಪ್ಪಯ್ಯನು ಒಪ್ಪಿಕೊಂಡಿದ್ದಾನೆ. ಒಪ್ಪಿಕೊಳ್ಳದೆ ಬೇರೆ ದಾರಿಯಿಲ್ಲ. ಒಪ್ಪಿಕೊಳ್ಳದಿದ್ದರೆ ಅವನಿಗೆ ಸಾಲ ಸಿಗುವುದಿಲ್ಲ. ಸಾಲ ಸಿಗದಿದ್ದರೆ ಬಿತ್ತನೆ ಇಲ್ಲ. ಬಿತ್ತನೆ ಮಾಡದೆ ಊರಿನಲ್ಲಿ ತಲೆಯೆತ್ತಿ ಬದುಕುವಂತಿಲ್ಲ. ಕಲ್ಲಳ್ಳಿಯಲ್ಲಿ ಬಿತ್ತನೆಗೆ ದಲ್ಲಾಳಿಗಳಿಂದ ಸಾಲತರುವುದು ಅಪರೂಪವೇನಲ್ಲ. ಎಲ್ಲಾ ರೈತರು ಈ ವ್ಯವಹಾರ ಮಾಡುತ್ತಾರೆ.

ತಿಪ್ಪಯ್ಯನು ಸಾಲತಂದು ಬಿತ್ತನೆ ಮಾಡಿದ್ದಾನೆ. ಈ ಸಾಲಿನಲ್ಲಿ ಒಳ್ಳೆಯ ಬೆಳೆ ಬಂದಿದೆ. ಜೋಳದ ಇಳುವರಿಯೂ ಉತ್ತಮವಾಗಿದೆ. ತಿಪ್ಪಯ್ಯನ ಸಂತೋಷಕ್ಕೆ ಪಾರವೇ ಇಲ್ಲ! ಪೈರಿನ ಕಟಾವು ಮುಗಿದಿದೆ. ಸುಗ್ಗಿ ಮುಗಿದಿದೆ. ಬಂದ ಒಟ್ಟು ಉತ್ಪನ್ನದಲ್ಲಿ ಐದು ಚೀಲ ಜೋಳವನ್ನು ತಿಪ್ಪಯ್ಯ ಮಾರಲು ನಿರ್ಧರಿಸುತ್ತಾನೆ.

ಶರತ್ತಿನಂತೆ ತಿಪ್ಪಯ್ಯನು ಜೋಳವನ್ನು ಶ್ರೀನಿವಾಸರಾಯನಿಗೆ ಮಾರಬೇಕು. ಹರಾಜಿನಲ್ಲಿ ಜೋಳವನ್ನು ಮಾರಲು ತಿಪ್ಪಯ್ಯನಿಗೆ ಸಾಧ್ಯವಿಲ್ಲ. ಮಂಡಿಯಲ್ಲಿ ಜೋಳದ ಹರಾಜು ಚೀಲಕ್ಕೆ ಇನ್ನೂರ ಅರವತ್ತು ರೂಪಾಯಿ. ಆದರೆ ತಿಪ್ಪಯ್ಯನ ಜೋಳಕ್ಕೆ ಶ್ರೀನಿವಾಸರಾಯನು ನಿಗದಿ ಮಾಡಿದ ಬೆಲೆ ಚೀಲಕ್ಕೆ ಇನ್ನೂರ ಐವತ್ತು ರೂಪಾಯಿ. ತಿಪ್ಪಯ್ಯನು ಚೀಲಕ್ಕೆ ಇನ್ನೂರ ಅರವತ್ತು ಮಾಡಿಕೊಳ್ಳಲು ಗೋಗರೆಯುತ್ತಾನೆ. ಶ್ರೀನಿವಾಸರಾಯನು ಇಂತಹ ಬೇಡಿಕೆಗಳಿಗೆಲ್ಲಾ ಜಗ್ಗುವವನಲ್ಲ. ಆದರೂ ಜೋಳದ ಬೆಲೆಯನ್ನು ಕೊನೆಗೆ ಚೀಲಕ್ಕೆ ಇನ್ನೂರ ಐವತ್ತೈದು ರೂಪಾಯಿ ನಿಗದಿ ಮಾಡುತ್ತಾನೆ.

ಮಾರುಕಟ್ಟೆಯಲ್ಲಿ ಜೋಳದ ಬೆಲೆ ಚೀಲಕ್ಕೆ ಇನ್ನೂರ ಅರವತ್ತು. ಆದರೆ ಸಾಲಗಾರನಾದ ತಿಪ್ಪಯ್ಯನ ಜೋಳದ ಬೆಲೆ ಮಾತ್ರ ಚೀಲಕ್ಕೆ ಇನ್ನೂರ ಐವತ್ತೈದು.

ಮಾರುಕಟ್ಟೆಯಲ್ಲಿ ತೂಕ ಮಾಡಲು, ಚಕ್ಕಡಿಯಿಂದ ಚೀಲ ಇಳಿಸಲು ಹಮಾಲಿ ಚೀಲಕ್ಕೆ ಒಂದು ಕೆ.ಜಿ. ಜೋಳ.

ಆದರೆ ಸಾಲಗಾರನಾದ ತಿಪ್ಪಯ್ಯನಿಗೆ ಹಮಾಲಿ ಚೀಲಕ್ಕೆ ಎರಡು ಕೆ.ಜಿ. ಜೋಳ.

ಮಾರುಕಟ್ಟೆಯಲ್ಲಿ ಕಸಕಡ್ಡಿ ಬಾಬ್ತು ಕಡಿತ ಚೀಲಕ್ಕೆ ಒಂದು ಕೆ.ಜಿ. ಜೋಳ.

ಆದರೆ ಸಾಲಗಾರವಾದ ತಿಪ್ಪಯ್ಯನ ಜೋಳದ ಕಡಿತ ಚೀಲಕ್ಕೆ ಎರಡು ಕೆ.ಜಿ. ಜೋಳ.

ಮಾರುಕಟ್ಟೆಯಲ್ಲಿ ದಲ್ಲಾಳಿ ರೇಟು ನೂರಕ್ಕೆ ಎರಡು ರೂಪಾಯಿ. ಆದರೆ ಸಾಲಗಾರನಾದ ತಿಪ್ಪಯ್ಯನಿಗೆ ದಲ್ಲಾಳಿ ನೂರಕ್ಕೆ ನಾಲ್ಕು ರೂಪಾಯಿ.

ತಿಪ್ಪಯ್ಯನಿಗೆ ಕೈಗೆ ಬಂದ ತುತ್ತು ಬಾಯಿಗಿಲ್ಲ ಎನ್ನುವಂತಾಗಿದೆ. ಶ್ರೀನಿವಾಸರಾಯನ ಸಾಲದ ಬಲೆಗೆ ಸಿಕ್ಕಿ ಹಾಕಿಕೊಂಡಿದ್ದಾನೆ. ಈ ಒಳಸುಳಿಯಿಂದಾಗಿ ತಿಪ್ಪಯ್ಯನ ಜೋಳಕ್ಕೆ ಮಾರುಕಟ್ಟೆಯ ಬೆಲೆಗಿಂತ ಕಡಿಮೆ ಬೆಲೆ. ಹಮಾಲಿ ಹೆಚ್ಚು, ಕಡಿತವೂ ಹೆಚ್ಚು. ದಲ್ಲಾಳಿ ರೇಟು ಕೂಡ ಹೆಚ್ಚು.

ತಿಪ್ಪಯ್ಯನಿಗೆ ನ್ಯಾಯವಾದ ಬೆಲೆ ಸಿಗಲಿಲ್ಲ. ಒಳಸುಳಿಯುಳ್ಳ ಮಾರುಕಟ್ಟೆ ದೋಷ ಇದು. ಒಳಸುಳಿಗೆ ಸಿಕ್ಕಿಬಿದ್ದ ರೈತನಿಗೆ ಬಿಡುಗಡೆ ಇಲ್ಲ. ಈ ಒಳಸುಳಿಯಿಂದಾಗಿ ದುಡಿಮೆಗೆ ತಕ್ಕ ಫಲ ಸಿಗುವುದಿಲ್ಲ. ಶ್ರೀನಿವಾಸರಾಯನಿಗೆ ವ್ಯಾಪಾರದಿಂದ ಅಪಾರ ಲಾಭ. ಲೇವಾದೇವಿಗಾರ ನಾಗಿರುವುದರಿಂದ ಬಡ್ಡಿಯೂ ಸಿಗುತ್ತದೆ. ಈ ಒಳಸುಳಿಯಿಂದಾಗಿ ಮಾರುಕಟ್ಟೆ ವ್ಯವಹಾರ ಅಸಮ ವ್ಯವಹಾರವಾಗುತ್ತದೆ. ಮಾರುಕಟ್ಟೆಯನ್ನು ಆಳುವವನು ಶ್ರೀನಿವಾಸರಾಯ. ತಿಪ್ಪಯ್ಯನು ಇಲ್ಲಿ ಒಳಸುಳಿಗೆ ಅಧೀನನಾಗಿದ್ದಾನೆ.

ಸಹಕಾರಿ ಸಂಘದಿಂದ ಸಾಲ ತಂದರೆ!

ತಿಪ್ಪಯ್ಯನು ಶ್ರೀನಿವಾಸರಾಯನಿಂದ ಸಾಲ ತಂದುದರಿಂದ ಈ ಎಲ್ಲಾ ಅನ್ಯಾಯ ಅನುಭವಿಸಿದ. ತಿಪ್ಪಯ್ಯನು ಸಾಲವನ್ನು ಸಹಕಾರಿ ಸೊಸೈಟಿಯಿಂದ ಅಥವಾ ಬ್ಯಾಂಕಿನಿಂದ ತಂದಿದ್ದರೆ! ಒಳಸುಳಿಗೆ ಅವನು ಬಲಿಯಾಗುತ್ತಿರಲಿಲ್ಲ. ಆದರೆ ಏನು ಮಾಡುವುದು! ಬ್ಯಾಂಕುಗಳಲ್ಲಿ, ಸಹಕಾರಿ ಸಂಘಗಳಲ್ಲಿ ತಿಪ್ಪಯ್ಯನಂತಹ ಬಡರೈತನಿಗೆ ಸಾಲಸಿಗುವುದಿಲ್ಲ. ಭೂಮಾಲೀಕರಿಗೆ, ಪ್ರಭಾವ ಇರುವವರಿಗೆ, ಪುಢಾರಿಗಳಿಗೆ ಸಾಲಸಿಗುತ್ತದೆ. ಸಹಕಾರಿ ಸಂಘದಲ್ಲಿ ಸಾಲವು ಮಂಜೂರಾಗಬೇಕಾದರೆ ತುಂಬಾ ದಿನ ಕಾಯಬೇಕು. ಅರ್ಜಿ ಹಾಕಬೇಕು. ತಿಪ್ಪಯ್ಯನಿಗೆ ಓದು-ಬರಹ ಬರುವುದಿಲ್ಲ. ಅರ್ಜಿ ಹೇಗೆ ಹಾಕುವುದು!

ಸಣ್ಣ-ಪುಟ್ಟ ರೈತರಿಗೆ ಬ್ಯಾಂಕುಗಳಿಂದ ಅನುಕೂಲವಾಗುತ್ತಿಲ್ಲ. ಇದಕ್ಕೆಲ್ಲಾ ತಿಪ್ಪಯ್ಯನಂತಹ ರೈತರು ಓದು-ಬರಹ ಕಲಿಯಬೇಕು.

ಕೃಷಿ ಮಾರುಕಟ್ಟೆಯಲ್ಲಿ ಒಳಸುಳಿಗಳಿವೆ. ಅವು ಸಣ್ಣ-ಪುಟ್ಟ ರೈತರ ಪರವಾಗಿಲ್ಲ. ಇಲ್ಲಿ ರೈತರ ಅಧಿಕಾರ ಕಡಿಮೆ. ಅದು ದಲ್ಲಾಳಿಗಳ ಪರವಾಗಿದೆ. ಲೇವಾದೇವಿಗಾರರ ಪರವಾಗಿದೆ. ಅದು ದೊಡ್ಡ ಭೂಮಾಲೀಕರ ಪರವಾಗಿದೆ. ದಲ್ಲಾಳಿಗಳು, ಲೇವಾದೇವಿಗಾರರು, ದೊಡ್ಡ ಭೂಮಾಲೀಕರೇ ಮಾರುಕಟ್ಟೆಯಲ್ಲಿ ಪ್ರಧಾನರು. ಸಣ್ಣ-ಪುಟ್ಟ ರೈತರು ಅಧೀನ ಸ್ಥಿತಿಯಲ್ಲಿದ್ದಾರೆ.

ಈ ಒಳಸುಳಿಯಿಂದ ತಿಪ್ಪಯ್ಯನಿಗೆ ಬಿಡುಗಡೆ ಇಲ್ಲವೆ!

ಬಿಡುಗಡೆ ಇದೆ. ತಿಪ್ಪಯ್ಯನು ಓದು-ಬರಹ ಕಲಿಯಬೇಕು. ಲೇಲಾದೇವಿಗಾರರಿಂದ ಸಾಲ ತರುವುದು ನಿಲ್ಲಿಸಬೇಕು. ಬ್ಯಾಂಕಿನಿಂದ ಸಾಲತರಬೇಕು. ಲೆಕ್ಕ ಮಾಡುವುದನ್ನು ಕಲಿಯಬೇಕು. ಮಾರುಕಟ್ಟೆಯಲ್ಲಿ ನಡೆಯುವ ಬೆಲೆಗೆ ಮಾತ್ರ ಮಾಲನ್ನು ಮಾರಬೇಕು.

ಮಾರುಕಟ್ಟೆಯ ಒಳಸುಳಿಗಳನ್ನು ಹತ್ತಿಕ್ಕಬೇಕು. ದಲ್ಲಾಳಿ, ಕಡಿತ, ಬಡ್ಡಿ ಇವುಗಳಿಂದ ತಿಪ್ಪಯ್ಯನನ್ನು ಬಿಡುಗಡೆಗೊಳಿಸಬೇಕು. ಸಣ್ಣ-ಪುಟ್ಟ ರೈತರು ಒಗ್ಗಟ್ಟಾಗಬೇಕು. ತಮ್ಮ ಹಿತ ಕಾಪಾಡಲು ರೈತರ ಸಂಘ ಕಟ್ಟಬೇಕು. ರೈತರು-ಕೂಲಿಕಾರರು ಹೋರಾಟ ಮಾಡಬೇಕು.

ಕೂಲಿಕಾರರ ಮಾರುಕಟ್ಟೆ

ಮಾರುಕಟ್ಟೆ ಮತ್ತು ಮನುಷ್ಯನ ನಡುವಿನ ಸಂಬಂಧಗಳು ವಿಚಿತ್ರವಾಗಿರುತ್ತವೆ. ಸರಕುಗಳ ಮಾರಾಟ ಮತ್ತು ಖರೀದಿ ನಡೆಯುವ ಮಾರುಕಟ್ಟೆಯು ಸರಕು ಮಾರುಕಟ್ಟೆ. ಸಾಲ ಕೊಡುವುದು, ಸಾಲ ಪಡೆಯುವುದು ಹಣದ ಮಾರುಕಟ್ಟೆ.

ಮಾರುಕಟ್ಟೆಯಲ್ಲಿ ಸರಕನ್ನು ಕೊಂಡುಕೊಳ್ಳಲು ಹಣಬೇಕು. ಮನುಷ್ಯ ಹಣವನ್ನು ಹೇಗೆ ಗಳಿಸುತ್ತಾನೆ? ಆಸ್ತಿ-ಭೂಮಿ ಇರುವವರಿಗೆ ವರಮಾನ ಬರುತ್ತದೆ. ನೌಕರಿ ಇರುವವರಿಗೆ ಪಗಾರ ಬರುತ್ತದೆ. ವ್ಯಾಪಾರಿಗಳಿಗೆ ಲಾಭದಿಂದ ವರಮಾನ ಬರುತ್ತದೆ. ಹೀಗೆ ಜನರಿಗೆ ಹಣ ಬರುತ್ತದೆ. ಹಣದಿಂದ ಕೊಳ್ಳುವ ಶಕ್ತಿ ಬರುತ್ತದೆ. ವಿನಿಮಯ ಶಕ್ತಿ ಬರುತ್ತದೆ. ಈ ಕೊಳ್ಳುವ ಶಕ್ತಿಯಿಂದ ಮಾರುಕಟ್ಟೆಯಲ್ಲಿ ಸರಕು ಖರೀದಿಸಬಹುದು. ಆಸ್ತಿ, ಭೂಮಿ, ನೌಕರಿ, ವ್ಯಾಪಾರ, ಕಸುಬುಗಳಿಂದ ಜನರಿಗೆ ಕೊಳ್ಳುವ ಶಕ್ತಿ ಪ್ರಾಪ್ತವಾಗುತ್ತದೆ. ಇವರೆಲ್ಲರಿಗೂ ಕೊಳ್ಳುವ ಶಕ್ತಿ ಇದೆ.

ಆದರೆ ಬಡವರು-ಕೂಲಿಕಾರರು, ಭೂಮಿ ಇಲ್ಲದವರು ನೌಕರಿ ಇಲ್ಲದವರು ಹಣ ಹೇಗೆ ಗಳಿಸುತ್ತಾರೆ? ಇವರಿಗೆ ಮಾರಲು ಆಸ್ತಿ-ಪಾಸ್ತಿ ಇಲ್ಲ. ಇವರಿಗೆ ಹಣಗಳಿಸಲು ಇರುವ ಮಾರ್ಗವೆಂದರೆ ಕೂಲಿ ಮಾಡುವುದು. ಕೂಲಿಕಾರರು ತಮ್ಮ ದೈಹಿಕ ದುಡಿಮೆಯನ್ನು ಮಾರಾಟ ಮಾಡುತ್ತಾರೆ. ದೈಹಿಕ ದುಡಿಮೆಯು ಮಾರಾಟದ ಸರಕಾಗುತ್ತದೆ. ಭೂಮಾಲಿಕರು, ವ್ಯಾಪಾರಿಗಳು, ಕಾರ್ಖಾನೆಗಳು, ಕೂಲಿಕಾರರನ್ನು ಕೂಲಿಗೆ ನೇಮಿಸಿಕೊಳ್ಳುತ್ತಾರೆ. ದೈಹಿಕ ದುಡಿಮೆಯ ಬೆಲೆ ಕೂಲಿ. ಕೂಲಿಕಾರರು ದುಡಿಮೆಯನ್ನು ಮಾರುತ್ತಾರೆ. ಮಾಲೀಕರು ದುಡಿಮೆಯನ್ನು ಕೊಳ್ಳುತ್ತಾರೆ. ಕೂಲಿಕೊಟ್ಟು ಕೂಲಿಕಾರರನ್ನು ಕೆಲಸಕ್ಕೆ ನೇಮಿಸಿಕೊಳ್ಳುತ್ತಾರೆ. ಸರಕುಗಳು ಮಾರಾಟವಾಗುತ್ತವೆ. ಅದರಂತೆ ದೈಹಿಕ



ಶ್ರೀಮಂತರ ಮನೆಗಳು

ದುಡಿಮೆಯೂ ಮಾರಾಟವಾಗುತ್ತದೆ. ಸರಕುಗಳನ್ನು ಜನ ಖರೀದಿಸುತ್ತಾರೆ. ಅದರಂತೆ ದೈಹಿಕ ದುಡಿಮೆಯನ್ನೂ ಮಾಲೀಕರು ಕೊಂಡುಕೊಳ್ಳುತ್ತಾರೆ.

ಈ ಮಾರುಕಟ್ಟೆಯನ್ನು ಕೂಲಿಕಾರರ ಮಾರುಕಟ್ಟೆ ಎನ್ನುತ್ತಾರೆ. ಕೂಲಿಕಾರರು ತಮ್ಮ ದೈಹಿಕ ದುಡಿಮೆಯನ್ನು ಮಾರಾಟಮಾಡುತ್ತಾರೆ. ಅವರು ತಮ್ಮನ್ನೇ ಮಾರಾಟ ಮಾಡಿಕೊಳ್ಳುತ್ತಿಲ್ಲ. ಮಾಲೀಕರು ಕೇವಲ ಕೂಲಿಕಾರರ ದುಡಿಮೆಯನ್ನು ಕೊಂಡುಕೊಳ್ಳುತ್ತಾರೆ. ಕೂಲಿಕಾರರನ್ನೇ ಕೊಂಡುಕೊಳ್ಳುವುದಿಲ್ಲ. ಕೂಲಿಕಾರರ ದೇಹದ ಮೇಲೆ ಮಾಲೀಕರಿಗೆ ಯಾವುದೇ ಅಧಿಕಾರ ಇಲ್ಲ. ಕೂಲಿಕಾರರ ದುಡಿಮೆಯ ಮೇಲೆ ಮಾಲೀಕರಿಗೆ ಅಧಿಕಾರವಿರುತ್ತದೆ.

ಕೂಲಿಕಾರರ ಮಾರುಕಟ್ಟೆಯಲ್ಲಿ ವ್ಯವಹಾರ ಹೇಗೆ ನಡೆಯುತ್ತದೆ?

ಸರಕು ಮಾರುಕಟ್ಟೆಯಲ್ಲಿ ಚೌಕಾಸಿ ನಡೆಯುತ್ತದೆ. ಆದರೆ ದುಡಿಮೆ ಮಾರುಕಟ್ಟೆಯಲ್ಲಿ ಮಾಲೀಕರು ಮಾತ್ರ ಚೌಕಾಸಿ ನಡೆಸಬಹುದು. ಕೂಲಿಕಾರರು ಚೌಕಾಸಿ ಮಾಡಲು ಸಾಧ್ಯವಿಲ್ಲ. ಏಕೆಂದರೆ ಕೂಲಿಕಾರರ ಮಾರುಕಟ್ಟೆಯು ಮಾಲೀಕರ ಪರವಾಗಿದೆ. ಅದು ಕೊಂಡುಕೊಳ್ಳುವವರ ಪರವಾಗಿದೆ. ಇಲ್ಲಿ ಮಾಲೀಕರದೇ ಮೇಲುಗೈ. ಅವರೇ ಪ್ರಧಾನರು.

ಕಲ್ಲಳ್ಳಿಯ ವೆಂಕಟಪ್ಪ

ಕಲ್ಲಳ್ಳಿಯಲ್ಲಿ ವೆಂಕಟಪ್ಪ ಎಂಬ ಕೂಲಿಕಾರನಿದ್ದಾನೆ. ಗೌಡರ ಮನೆಯಲ್ಲಿ ಅವನೊಬ್ಬ ಕೂಲಿಯಾಳು. ಅವನಿಗೆ ಕೂಲಿ ದಿನಕ್ಕೆ ಹತ್ತು ರೂಪಾಯಿಗಳು. ಹತ್ತು ರೂಪಾಯಿ ಕೂಲಿಯಿಂದ ವೆಂಕಟಪ್ಪನ ಸಂಸಾರ ನಡೆಯಬೇಕು. ಹತ್ತು ರೂಪಾಯಿ ಕೂಲಿ ವೆಂಕಟಪ್ಪನಿಗೆ ಸಾಕಾಗುವುದಿಲ್ಲ. ದಿನದ ಕೂಲಿ ಹದಿನೈದು ರೂಪಾಯಿಯಾದರೆ ಎಷ್ಟು ಚೆಂದ ಎಂದು ವೆಂಕಟಪ್ಪ ಕನಸುಕಾಣುತ್ತಾನೆ. ಆದರೆ ಕಲ್ಲಳ್ಳಿಯಲ್ಲಿ ದಿನಗೂಲಿಗೆ ಹದಿನೈದು ರೂಪಾಯಿ ಯಾರು ಕೊಡಬೇಕು? ಹದಿನೈದು ರೂಪಾಯಿಗೆ ಮಾತ್ರ ಕೂಲಿ ಮಾಡುತ್ತೇನೆ ಎಂದು ವೆಂಕಟಪ್ಪ ಹೇಳುವಂತಿಲ್ಲ. ಏಕೆಂದರೆ ಕೂಲಿಗೆ ಹೋಗದಿದ್ದರೆ ವೆಂಕಟಪ್ಪನಿಗೆ



ಬಡವರ ಗುಡಿಸಲುಗಳು

ಉಪವಾಸವೇಗತಿ. ಬೆಲೆಕಡಿಮೆ ಎಂದೂ, ಕೂಲಿ ಕಡಿಮೆ ಎಂದು ಸುಮ್ಮನೆ ಕೂರುವಂತಿಲ್ಲ. ಏಕೆಂದರೆ ಕೂಲಿ ಇಲ್ಲದೆ ಕೂಳು ಇಲ್ಲ.

ದುಡಿಮೆಯು ದೈಹಿಕವಾದುದು. ಅದಕ್ಕೆ ದಣಿವಾಗುತ್ತದೆ. ಅದಕ್ಕೆ ಜಡ್ಡಾಗುತ್ತದೆ. ವಯಸ್ಸಾದಂತೆ ದೇಹವು ಶಿಥಿಲಗೊಳ್ಳುತ್ತದೆ. ಕೂಲಿಕಾರರು ಇಷ್ಟೇ ಕೂಲಿ ಕೊಡಿ ಎಂದು ಕೇಳುವಂತಿಲ್ಲ. ಮಾರುಕಟ್ಟೆಯಲ್ಲಿ ಸರಕುಗಳ ಬೆಲೆ ಏರುತ್ತದೆ. ಆದರೆ ಕೂಲಿ ಹಾಗೆ ಏರುವುದಿಲ್ಲ. ದುಡಿಯುವವರ ಸಂಖ್ಯೆ ಅಧಿಕ. ಕೂಲಿಕಾರರ ಸಂಖ್ಯೆ ಅಧಿಕ. ಆದರೆ ದುಡಿಮೆಯ ಸಂಖ್ಯೆ ಕಡಿಮೆ. ಕೆಲಸಗಳು ದೊರೆಯುವುದಿಲ್ಲ, ಕೂಲಿಕಾರರ ಪೂರೈಕೆ ಅಧಿಕ. ಬೇಡಿಕೆ ಕಡಿಮೆ. ಇದರ ಪರಿಣಾಮ ಕೂಲಿ ಕಡಿಮೆ. ಜನಸಂಖ್ಯೆಯು ಮಿತಿಮೀರಿ ಏರುತ್ತದೆ. ಇದರಿಂದಾಗಿ ಕೂಲಿಕಾರರ, ಬಡವರ ಸಂಖ್ಯೆ ಜಾಸ್ತಿಯಾಗುತ್ತದೆ. ಆದರೆ ಕೆಲಸಗಳು ಸೃಷ್ಟಿಯಾಗುತ್ತಿಲ್ಲ. ಇದನ್ನೇ ನಾವು ನಿರುದ್ಯೋಗ ಎನ್ನುವುದು.

ಕೂಲಿಕಾರರು ದಿನಕ್ಕೆ ಎಷ್ಟು ಗಂಟೆ ದುಡಿಯಬೇಕು!

ವೆಂಕಟಪ್ಪನು ಗೌಡರ ಮನೆಯ ಆಳು. ಅವರ ಮನೆಯಲ್ಲಿ ಹೊಲ-ಗದ್ದೆ-ತೋಟಗಳಲ್ಲಿ ದುಡಿಯುತ್ತಾನೆ. ಬೆಳಿಗ್ಗೆ ಸೂರ್ಯ ಮೂಡಿದಾಗ ದುಡಿಮೆ ಶುರು. ರಾತ್ರಿ ಏಳುಗಂಟೆಯವರೆಗೆ ದುಡಿಯಬೇಕು. ನೌಕರಿದಾರರಿಗೆ ಇರುವಂತೆ ವೆಂಕಟಪ್ಪನಿಗೆ ವಾರದ ರಜೆ ಇಲ್ಲ. ದುಡಿಮೆಯ ಗಂಟೆಗಳ ನಿಗದಿ ಇಲ್ಲ. ಜಡ್ಡಾದರೂ ರಜೆ ಇಲ್ಲ.

ಬರಗಾಲ ಬಂದರೆ, ಪ್ರವಾಹ ಬಂದರೆ, ಭೂಕಂಪ ಉಂಟಾದರೆ ಕೂಲಿಯೇ ಸಿಗುವುದಿಲ್ಲ. ಕೂಲಿ ಸಿಗದಿದ್ದರೆ ವೆಂಕಟಪ್ಪ ಹೇಗೆ ಬದುಕಬೇಕು? ವೆಂಕಟಪ್ಪನು ಕೆಲಸವಿಲ್ಲದೆ ಕೂರಲು ಸಾಧ್ಯವೇ ಇಲ್ಲ. ಬರಿಹೊಟ್ಟೆ ಅರೆ ಹೊಟ್ಟೆಯಲ್ಲಿ ದಿನ ನೂಕಬೇಕು. ಹೆಂಗಸರು ಮಕ್ಕಳು ಹಸಿವಿನಿಂದ ಕಂಗಾಲು. ವೆಂಕಟಪ್ಪನ ಮಕ್ಕಳಿಗೆ ಮೈತುಂಬ ಬಟ್ಟೆ ಇಲ್ಲ. ವೆಂಕಟಪ್ಪನು ಕೊಳ್ಳುವ ಜೋಳ, ಎಣ್ಣೆ, ಚಹಾಪುಡಿ ದುಬಾರಿ. ಆದರೆ ವೆಂಕಟಪ್ಪನ ಕೂಲಿ ಮಾತ್ರ ಕಡಿಮೆ.

ಜೀತ ಪದ್ಧತಿ

ಕೂಲಿ ಸಿಗದಿದ್ದರೆ ಕೂಲಿಕಾರರು ಬರಿಹೊಟ್ಟೆಯಲ್ಲಿ ಇರಬೇಕಾಗುತ್ತದೆ. ಬರಿಹೊಟ್ಟೆಯಲ್ಲಿ ಬದುಕುವುದು ಹೇಗೆ? ಕೂಲಿ ಸಿಗದಿದ್ದಾಗ ವೆಂಕಟಪ್ಪ ಗೌಡರಿಂದ ಸಾಲ ಪಡೆಯುತ್ತಾನೆ. ವೆಂಕಟಪ್ಪನು ಸಾಲ-ಬಡ್ಡಿ ಸೇರಿಸುವ ಬಗೆ ಹೇಗೆ? ಅವನಿಗೆ ಕೂಲಿಯೊಂದೆ ಆದಾಯ. ಕೂಲಿಯು ಕೂಳಿಗೇ ಸಾಕಾಗುವುದಿಲ್ಲ.

ವೆಂಕಟಪ್ಪನಿಗೆ ಶಂಕರನೆಂಬ ಹತ್ತುವರ್ಷದ ಮಗನಿದ್ದಾನೆ. ಶಾಲೆಗೆ ಹೋಗುವ ವಯಸ್ಸು. ಆದರೆ, ಗೌಡರ ಸಾಲ ತೀರಿಸಲು ಶಂಕರನನ್ನು ಗೌಡರ ಮನೆಯಲ್ಲಿ ದುಡಿಯಲು ಹಚ್ಚುತ್ತಾನೆ. ಚಿಕ್ಕ ವಯಸ್ಸಿನ ಬಾಲಕರನ್ನು ಕೂಲಿಗೆ ನೇಮಿಸಿಕೊಳ್ಳುವುದು ಅಪರಾಧ. ಆದರೆ ಕಲ್ಲಳ್ಳಿಯಲ್ಲಿ ಇದನ್ನು ಯಾರು ಕೇಳಬೇಕು?

ಶಂಕರನ ದುಡಿಮೆಯನ್ನು ಗೌಡರಲ್ಲಿ ಒತ್ತೆ ಇಡಲಾಗಿದೆ. ವೆಂಕಟಪ್ಪನು ಗೌಡರಲ್ಲಿ ಸಾಲ ಮಾಡಿದ್ದಾನೆ. ಅವನಿಗೆ ಸಾಲ ತೀರಿಸಲು ಬೇರೆ ಆದಾಯದ ಮೂಲವಿಲ್ಲ. ಸಾಲದ ಬಡ್ಡಿ ತೀರಿಸಲು ಶಂಕರನು ಗೌಡರ ಮನೆಯಲ್ಲಿ ದುಡಿಯಬೇಕು. ಶಂಕರನ ದುಡಿಮೆಯ ಮೇಲೆ ಗೌಡರ ಹಕ್ಕಿದೆ. ಇಂತಹ ದುಡಿಮೆಗೆ ಕಾನೂನಿನಲ್ಲಿ ಅವಕಾಶವಿಲ್ಲ. ಬಾಲಕಾರ್ಮಿಕರನ್ನು ದುಡಿಮೆಗೆ ನೇಮಿಸಿಕೊಳ್ಳುವಂತಿಲ್ಲ. ಜೀತಕ್ಕೆ ನೇಮಿಸಿಕೊಳ್ಳುವುದನ್ನು ನಿಷೇಧಿಸಲಾಗಿದೆ. ಇದೊಂದು ಕ್ರೂರ ಆಚರಣೆ.

ಶಾಲೆಯಲ್ಲಿ ಇರಬೇಕಾಗಿದ್ದ ಶಂಕರ ಗೌಡರ ದೊಡ್ಡಿಯಲ್ಲಿ ಸೆಗಣಿ ಬಳಿಯುತ್ತಿದ್ದಾನೆ. ಗೋಲಿ-ಚೆಂಡು ಆಡಬೇಕಾಗಿದ್ದ ಶಂಕರನು ಮಣ್ಣು ಹೊರುತ್ತಿದ್ದಾನೆ. ಶಂಕರನ ಬಾಲ್ಯವೇ ಮುರುಟಿ ಹೋಗಿದೆ. ಕೂಲಿಕಾರರ ಮಾರುಕಟ್ಟೆಯಲ್ಲಿನ ಅಸಮ ವಿನಿಮಯದಿಂದಾಗಿ ಈ ವಿಚಿತ್ರ ಸಂಭವಿಸಿದೆ.

ಕೂಲಿಕಾರರ ಮಾರುಕಟ್ಟೆಯು ಅವಮಾನ, ಅಸಮಾನತೆ, ಆಶ್ರಯಗಳ ಮೇಲೆ ನಿಂತಿದೆ. ಕೂಲಿಕಾರರಿಗೆ ನ್ಯಾಯವಾದ ಕೂಲಿ ದೊರೆಯುತ್ತಿಲ್ಲ. ಸದಾ ಕೂಲಿ ಕೆಲಸ ದೊರೆಯುತ್ತದೆ ಎಂಬ ಗ್ಯಾರಂಟಿಯೂ ಇಲ್ಲ. ಹೆಂಗಸರು ಮಕ್ಕಳೂ ಕೂಡ ದುಡಿಯಬೇಕು. ದುಡಿಮೆಯನ್ನೇ ಒತ್ತೆ ಇಟ್ಟುಕೊಳ್ಳಲಾಗುತ್ತಿದೆ.

ಶಂಕರನು ಜೀತಕ್ಕೆ ಯಾಕೆ ದುಡಿಯಬೇಕು?

ಜೀತಕ್ಕೆ ದುಡಿಯುವ ಪರಿಸ್ಥಿತಿ ಯಾಕೆ ಇದೆ? ಮಕ್ಕಳನ್ನು ಜೀತಕ್ಕೆ ಯಾಕೆ ಸೇರಿಸುತ್ತಾರೆ? ಕೂಲಿಕಾರರ ಬದುಕು ಉತ್ತಮಗೊಳ್ಳದೆ ಜೀತ ನಾಶವಾಗುವುದಿಲ್ಲ. ದುಡಿಮೆ ಮಾರುಕಟ್ಟೆಯಲ್ಲಿ ಅಸಮ ವಿನಿಮಯ ಸಂಬಂಧಗಳಿವೆ. ಕೂಲಿ ಮಾರುಕಟ್ಟೆಯಲ್ಲಿ ಕೂಲಿಕಾರರು ಮತ್ತು ಮಾಲೀಕರು ಸಮಾನ ಶಕ್ತಿ-ನೆಲೆ ಪಡೆದಿಲ್ಲ. ಅಸಮ ಸಂಬಂಧವು ಕೂಲಿಕಾರರ ಶೋಷಣೆಗೆ ಕಾರಣವಾಗಿದೆ. ಕೂಲಿ ಮಾರುಕಟ್ಟೆಯು ಮಾಲೀಕರ ಪರವಾಗಿದೆ. ಆಸ್ತಿಯುಳ್ಳವರ ಪರವಾಗಿರುತ್ತದೆ. ಇಲ್ಲಿ ಮಾಲೀಕರು ಅಧಿಕಾರ ಚಲಾಯಿಸುತ್ತಾರೆ. ಕೂಲಿಕಾರರು ಮಾರುಕಟ್ಟೆಯ ಅಧೀನದಲ್ಲಿ ಇದ್ದಾರೆ. ಈ ಅಸಮ ವಿನಿಮಯ ಸಂಬಂಧ ಮುರಿಯುವುದು ಹೇಗೆ?

ಕೂಲಿ ಮಾರುಕಟ್ಟೆಯಲ್ಲಿ ಎರಡು ಪಕ್ಷಗಳಿವೆ. ಒಂದು ಕೂಲಿ ಮಾಡುವವರು ಇನ್ನೊಂದು ಮಾಲೀಕರು. ಮಾಲೀಕರಿಗೆ ಮಾರುಕಟ್ಟೆಯ ಮೇಲೆ ಅಧಿಕಾರವಿದೆ. ಇಂತಹ ಮಾರುಕಟ್ಟೆಯಲ್ಲಿ ಸರ್ಕಾರವು ಮೂರನೇ ಪಕ್ಷವಾಗಿದೆ. ಮಾರುಕಟ್ಟೆಯ ಅಸಮ ವಿನಿಮಯ ಸಂಬಂಧವನ್ನು ಸರಿಪಡಿಸಲು ಸರ್ಕಾರವು ಕೂಲಿಕಾರರಿಗೆ ರಕ್ಷಣೆ ಒದಗಿಸಬೇಕು. ಸರ್ಕಾರ ಕೂಲಿಕಾರರ ಪರ ವಹಿಸಬೇಕು. ಕೂಲಿ ದರದ ಮೇಲೆ ಸರ್ಕಾರವು ನಿಗಾವಹಿಸಬೇಕು. ಕೂಲಿ ದುಡಿಯುವವರಿಗೆ ವರ್ಷ ಪೂರ್ತಿ ಕೆಲಸ ಒದಗಿಸಬೇಕು. ಕೂಲಿಕಾರರಿಗೆ ಉಚಿತ ವೈದ್ಯಕೀಯ ಸೌಲಭ್ಯ ಒದಗಿಸಬೇಕು. ಕೂಲಿಕಾರರ ಮಕ್ಕಳಿಗೆ ಶಿಕ್ಷಣ ಸೌಲಭ್ಯ ಒದಗಿಸಬೇಕು. ಕೂಲಿಕಾರರಿಗೂ ಓದು-ಬರಹ ಕಲಿಸಬೇಕು. ಮಾಲೀಕರ ಅಧಿಕಾರವನ್ನು ಸರ್ಕಾರ ಮೊಟಕುಗೊಳಿಸಬೇಕು. ಒಟ್ಟಾರೆ ಸರ್ಕಾರವು ಕೂಲಿಕಾರರ ಹಿತ ಕಾಪಾಡಬೇಕು.

ಹಾಗಾದರೆ ಕೂಲಿಕಾರರು ಏನು ಮಾಡಬೇಕು?

ಕೂಲಿಕಾರರ ಮಾರುಕಟ್ಟೆಯಲ್ಲಿ ಮಾಲೀಕರ ಅಧಿಕಾರ ಪ್ರಧಾನವಾಗಿದೆ. ಕೂಲಿಕಾರರು ಅಧೀನ ಸ್ಥಿತಿಯಲ್ಲಿದ್ದಾರೆ. ಈ ರೀತಿಯ ಅಸಮ ಸಂಬಂಧವನ್ನು ಸರ್ಕಾರ ಮಧ್ಯ ಪ್ರವೇಶಿಸಿ ಸರಿಪಡಿಸಬಹುದು. ಅಧೀನ-ಪರಾಧೀನ ಸ್ಥಿತಿಯಲ್ಲಿರುವ ಕೂಲಿಕಾರರ ಪರವಾಗಿ ಸರ್ಕಾರ ನಿಲ್ಲಬಹುದು. ಆದರೆ, ಸರ್ಕಾರದ ಧೋರಣೆಯನ್ನು ಹೇಳಲು ಬರುವುದಿಲ್ಲ. ಅದು ಕೂಲಿಕಾರರ ಪರವಾಗಿ ಕೇವಲ ಕೆಲವು ಕಾನೂನುಗಳನ್ನು ರಚಿಸುತ್ತದೆ.

ಶಾಸನಗಳನ್ನು ಜಾರಿಗೊಳಿಸುತ್ತದೆ. ಆದರೆ ನಮಗೆ ಗೊತ್ತಿದೆ. ಕಾನೂನು-ಶಾಸನಗಳಿಂದ ಏನೂ ಪ್ರಯೋಜನವಿಲ್ಲ. ಈ ಕಾನೂನು-ಶಾಸನಗಳನ್ನು ಜಾರಿಗೊಳಿಸುವಾಗ ಮಾಲೀಕರಿಗೆ ಅನುಕೂಲವಾಗುವಂತೆ ಮಾಡಲಾಗುತ್ತದೆ. ಏಕೆಂದರೆ ಆಡಳಿತ ನಡೆಸುವ ಜನರೂ ಸಹ ಮಾಲೀಕರ ಪರ ಇರುತ್ತಾರೆ. ಇದರಿಂದ ಸರ್ಕಾರದ ಉದ್ದೇಶ ಪೂರ್ಣವಾಗಿ ಸಫಲವಾಗುವುದಿಲ್ಲ.

ಕೂಲಿಕಾರರ ಸಂಘ

ಕೂಲಿಕಾರರ ಚೌಕಾಸಿ ಶಕ್ತಿ ಕಡಿಮೆ. ಕೂಲಿಕಾರರು ಇಷ್ಟೇ ಕೂಲಿ ಕೊಡಿ ಎಂದು ಒತ್ತಾಯಿಸಲು ಸಾಧ್ಯವಿಲ್ಲ. ಕೂಲಿಕಾರರದು ಹತಾಶ ಮಾರಾಟ. ಆದರೂ ಸಹ ಒಂದು ಉಪಾಯವಿದೆ. ಕೂಲಿಕಾರರು ಒಟ್ಟಾಗಿ ನಿಂತರೆ ಕೆಲವು ಅನುಕೂಲಗಳನ್ನು ಪಡೆಯಬಹುದು. ಒಗ್ಗಟ್ಟಿನಲ್ಲಿ ಶಕ್ತಿ ಇದೆ. ಕೂಲಿಕಾರರ ಸಂಘಗಳು ಹುಟ್ಟಬೇಕು. ಆಗ ಕೂಲಿಕಾರರ ಚೌಕಾಸಿ ಉತ್ತಮಗೊಳ್ಳುತ್ತದೆ. ಕೂಲಿಕಾರರು ಒಂದು ಶಕ್ತಿಯಾಗಿ ರೂಪುಗೊಳ್ಳಬೇಕು. ಆಗ ಸರ್ಕಾರವೂ ಸಹ ಅವರ ಪರವಾಗುತ್ತದೆ. ಸರ್ಕಾರದ ನಿಲುವು ಯಾವಾಗಲೂ ಶಕ್ತಿ, ಅಧಿಕಾರದ ಕಡೆಗಿರುತ್ತದೆ. ಕೂಲಿ ಮಾರುಕಟ್ಟೆಯಲ್ಲಿ ಮಾಲೀಕರ ಅಧಿಕಾರವನ್ನು ಮೊಟಕುಗೊಳಿಸಲು ಕೂಲಿಕಾರರು ಸಂಘ ಮಾಡಿಕೊಳ್ಳಬೇಕು.

ಸಂಘದಿಂದ ಕೂಲಿ ಹೆಚ್ಚುವುದಿಲ್ಲ!

ಕೂಲಿಕಾರರು ಸಂಘ ರಚಿಸಿಕೊಂಡ ತಕ್ಷಣ ಕೂಲಿ ದರವು ಹೆಚ್ಚಾಗುವುದಿಲ್ಲ, ಏಕೆಂದರೆ ಕೂಲಿ ಮಾರುಕಟ್ಟೆ ಪರಿಸ್ಥಿತಿ ಹಾಗಿದೆ. ಕೂಲಿಕಾರರ ಸಂಖ್ಯೆ ಜಾಸ್ತಿ. ಕೆಲಸಗಳ ಸಂಖ್ಯೆ ಕಡಿಮೆ. ಕೂಲಿಕಾರರ ಸಂಘದಿಂದ ಬೇರೆ ಕೆಲವು ಲಾಭಗಳಿವೆ.

ಸಂಘದಿಂದ ಕೂಲಿಕಾರರಿಗೆ ಶಕ್ತಿ ಪ್ರಾಪ್ತವಾಗುತ್ತದೆ. ರಾಜಕೀಯ ನೆಲೆಯೊಂದು ಸಿಗುತ್ತದೆ. ಇದರಿಂದ ಸರ್ಕಾರವು ಕೂಲಿಕಾರರ ಒತ್ತಾಯಗಳನ್ನು ಕಡೆಗಣಿಸಲು ಸಾಧ್ಯವಿಲ್ಲ. ಕೂಲಿಕಾರರ ಸಂಘಗಳು ಕಾನೂನುಗಳ ಜಾರಿಯ ಬಗ್ಗೆ ನಿಗಾವಹಿಸಬಹುದು.

ದಿನಕ್ಕೆ ಎಂಟುಗಂಟೆ ದುಡಿಮೆ

ಕಾನೂನಿನ ಪ್ರಕಾರ ದಿನದಲ್ಲಿ ಎಂಟುಗಂಟೆ ದುಡಿಯಬೇಕು. ಎಂಟುಗಂಟೆಗಿಂತ ಹೆಚ್ಚಿಗೆ ದುಡಿದರೆ ಅದಕ್ಕೆ ಹೆಚ್ಚಿನ ಕೂಲಿನೀಡಬೇಕು. ಆದರೆ ಈ ನಿಯಮ ಕೂಲಿಕಾರರಿಗೆ ಅನ್ವಯವಾಗುವುದಿಲ್ಲ. ಈ ನಿಯಮ ಕೇವಲ ನೌಕರಿದಾರರಿಗೆ ಮತ್ತು ಕಾರ್ಮಿಕರಿಗೆ ಅನ್ವಯವಾಗುತ್ತದೆ.

ಕೂಲಿಕಾರರು ಸಣ್ಣಪುಟ್ಟ ಕಾರ್ಖಾನೆಗಳಲ್ಲಿ ದುಡಿಯುತ್ತಾರೆ. ರಸ್ತೆ ಕೆಲಸ, ಮನೆಕಟ್ಟುವ ಕೆಲಸ, ಸೇತುವೆ ನಿರ್ಮಾಣ ಮುಂತಾದ ಕೆಲಸಗಳಲ್ಲಿ ಎಂಟುಗಂಟೆ ದುಡಿಮೆ ಜಾರಿಯಲ್ಲಿಲ್ಲ. ಇಲ್ಲಿ ಕೆಲಸಗಾರರು ದಿನನಿತ್ಯ ಹತ್ತರಿಂದ ಹನ್ನೆರಡು ಗಂಟೆ ದುಡಿಯಬೇಕು.

ಕೂಲಿ ಮಾಡುವ ಹೆಂಗಸರು ಕೂಡ ಹತ್ತರಿಂದ ಹನ್ನೆರಡುಗಂಟೆ ದುಡಿಯಬೇಕು. ಹೆಣ್ಣು ಕೂಲಿಯಾಳುಗಳ ಬದುಕು ನರಕವಾಗಿದೆ. ಬೆಳಿಗ್ಗೆಯಿಂದ ಸಂಜೆಯವರಿಗೆ ದುಡಿಯಬೇಕು. ಸಂಜೆ ಮನೆಗೆ ಬಂದು ಗಂಜಿ ಕಾಯಿಸಬೇಕು, ನೀರು ತುಂಬ ಬೇಕು, ಹಸಿದ ಮಕ್ಕಳ ಹೊಟ್ಟೆಗೆ ನೀಡಬೇಕು.

ಬಸುರಿ-ಬಾಣಂತಿಯರೂ ದುಡಿಯಬೇಕಾದ ಸ್ಥಿತಿ ಇದೆ. ಕೂಲಿ ಹೆಣ್ಣುಗಳಿಗೆ ಹೆರಿಗೆ ಭತ್ಯ-ಬಾಣಂತಿ ರಜೆ ಇಲ್ಲ. ದುಡಿಮೆಯ ಸ್ಥಳದಲ್ಲಿ ಕೂಸಿಗೆ ಮೊಲೆ ಕೊಡಲು ಸಮಯವಿರುವುದಿಲ್ಲ.

ಇಲ್ಲಿ ಕೂಲಿಕಾರರ ಸಂಘದ ಪಾತ್ರ ಮಹತ್ವದ್ದಾಗಿದೆ. ಸಂಘವು ಎಂಟುಗಂಟೆ ದುಡಿಮೆ ಬಗ್ಗೆ ಒತ್ತಾಯಿಸಬಹುದು. ಎಂಟು ಗಂಟೆ ದುಡಿಮೆಯ ಕಾನೂನನ್ನು ಮಾಲೀಕರು ಪಾಲಿಸುವಂತೆ ಮಾಡಬಹುದು. ಇದನ್ನು ಅಧಿಕಾರಿಗಳು ನಿಷ್ಠೆಯಿಂದ ಜಾರಿಗೆ ತರುವುದಿಲ್ಲ. ಆದ್ದರಿಂದ ಕೂಲಿಕಾರರ ಸಂಘವು ಹೋರಾಟ ನಡೆಸಬೇಕು.

ಹೊಲ ಗದ್ದೆಗಳಲ್ಲಿ, ಮಳೆ, ಬಿಸಿಲಲ್ಲಿ ರಕ್ತಸುರಿಸುವ, ಬೆವರು ಸುರಿಸುವ, ಕಣ್ಣೀರು ಸುರಿಸುವ ಕೂಲಿಕಾರರಿಗೆ ರಕ್ಷಣೆ ಇಲ್ಲ. ನಗರಗಳಲ್ಲಿ ಓದು ಬರಹ ಬರುವ

ನೌಕರಿದಾರರಿಗೆ ಎಲ್ಲಾ ರಕ್ಷಣೆ ಇದೆ. ಕೂಲಿಕಾರರನ್ನು ಯಾರು ಕೇಳಬೇಕು! ಹೆಣ್ಣಾಳುಗಳ ನೋವನ್ನು ಯಾರು ಕೇಳಬೇಕು.

ಇದಕ್ಕಾಗಿ ಕೂಲಿಕಾರರು ಸಂಘ ಕಟ್ಟಬೇಕು. ಸಂಘದ ಮೂಲಕ ಮಾಲೀಕರ ದಬ್ಬಾಳಿಕೆಯನ್ನು ತಡೆಗಟ್ಟಬಹುದು. ಅಧಿಕಾರಿಗಳು ಕಾನೂನನ್ನು ಜಾರಿಗೊಳಿಸುವಂತೆ ಒತ್ತಾಯ ಮಾಡಬಹುದು. ಕೂಲಿಕಾರರ ಸಂಘವು ಕೂಲಿಕಾರರಿಗೆ ತಿಳುವಳಿಕೆ ನೀಡಬಹುದು. ಅವರಿಗೆ ಓದು-ಬರಹ ಕಲಿಸಬಹುದು. ಎಲ್ಲರಲ್ಲೂ ಸಹೋದರ ಭಾವನೆ ಮೂಡಿಸಬಹುದು. ಇದರಿಂದ ಸಂಘಕ್ಕೆ ಬಲ ಬರುತ್ತದೆ. ಕೂಲಿಕಾರರೆಲ್ಲಾ ಒಂದು ಎಂಬ ಭಾವನೆಯನ್ನು ಎಚ್ಚರಗೊಳಿಸಬೇಕು. ಓದು-ಬರಹ ಬಂದರೆ ಸರ್ಕಾರ ಒದಗಿಸುವ ಸಲವತ್ತುಗಳನ್ನು ಕೇಳಿ ಪಡೆಯಬಹುದು.

ವಾರಕ್ಕೆ ಒಂದು ದಿನ ರಜ

ಕೂಲಿಕಾರರ ಕೆಲಸ ಹಂಗಾಮಿಯಾದುದು. ಕೂಲಿ ಕೆಲಸವೇನೂ ಖಾಯಂ ನೌಕರಿಯಲ್ಲ. ಇದರಿಂದಾಗಿ ಕಾನೂನುಗಳನ್ನು ಇಲ್ಲಿ ಜಾರಿಗೊಳಿಸುವುದು ಕಷ್ಟ. ಕೂಲಿಕಾರರದು ದಿನಗೂಲಿ ಕೆಲಸ. ಕಾನೂನಿನ ಪ್ರಕಾರ ಕೂಲಿಕಾರರಿಗೆ ವಾರಕ್ಕೆ ಒಂದು ದಿನ ರಜ ಕೊಡಬೇಕು. ಆದರೆ ಇದನ್ನು ಜಾರಿಗೆ ತರುವುದು ಹೇಗೆ? ವಾರದ ರಜೆಗೆ ಕೂಲಿ ನೀಡಬೇಕು. ಇದಕ್ಕೆ ಮಾಲೀಕರು ಸಿದ್ಧರಿಲ್ಲ. ದುಡಿದರೆ ಮಾತ್ರ ಕೂಲಿ. ವಾರಕ್ಕೆ ಒಂದು ದಿನ ರಜೆ, ಕಾನೂನನ್ನು ಜಾರಿಗೊಳಿಸಲು ಕೂಲಿಕಾರರ ಸಂಘ ಒತ್ತಾಯಿಸಬೇಕು. ಇದನ್ನು ಜಾರಿಗೊಳಿಸುವುದು ಅಧಿಕಾರಿಗಳಿಂದ ಸಾಧ್ಯವಿಲ್ಲ.

'ವಾರಕ್ಕೆ ಒಂದು ದಿನ ಕೂಲಿ ಸಹಿತ ರಜೆ' ಕೂಲಿಕಾರರ ಹಕ್ಕಾಗಿದೆ. ಇದನ್ನು ಒತ್ತಾಯಿಸಲು ಕೂಲಿಕಾರರಿಗೆ ತ್ರಾಣವಿಲ್ಲ. ಕೂಲಿಕಾರರ ಸಂಘವಾದರೆ ಇದನ್ನು ಗಟ್ಟಿಯಾಗಿ ಕೇಳಬಹುದು. ಹೀಗೆ ಕೂಲಿಕಾರರ ಸಂಘವು ಕೂಲಿಕಾರರ ಹಿತ ಕಾಪಾಡಬಹುದು.

ಕೂಲಿಕಾರರ ಮಾರುಕಟ್ಟೆಯಲ್ಲಿ ಜಾತಿ

ಮಳೆ ಗಾಳಿ ಬಿಸಿಲುಗಳಿಗೆ ಮೈಯೊಡ್ಡಿ ಬೆವರು-ರಕ್ತ-ಕಣ್ಣೀರು ಸುರಿಸಿ ದುಡಿಯುವ ಕೂಲಿಕಾರರಿಗೆ ತಮ್ಮ ದೈಹಿಕ ದುಡಿಮೆಯನ್ನಲ್ಲದೆ ಮಾರಲು ಬೇರೇನೂ ಇಲ್ಲ. ಇಲ್ಲಿ ಕೂಲಿಕಾರರದು ಒಂದು ವರ್ಗ, ಮಾಲೀಕರದು ಇನ್ನೊಂದು ವರ್ಗ. ಕೂಲಿಕಾರರು ಕೂಲಿಮಾಡುತ್ತಾರೆ. ದೈಹಿಕ ದುಡಿಮೆಯನ್ನು ಕೂಲಿಗೆ ಮಾರುತ್ತಾರೆ. ಮಾಲೀಕರು ಅದನ್ನು ಕೂಲಿಕೊಟ್ಟು ಕೊಳ್ಳುತ್ತಾರೆ.

ಇಲ್ಲಿ ಮಾಲೀಕರೆಲ್ಲಾ ಮೇಲು ಜಾತಿಯವರಾಗಿದ್ದಾರೆ. ಕೂಲಿಕಾರರೆಲ್ಲಾ ಕೀಳು ಜಾತಿಯವರಾಗಿದ್ದಾರೆ. ಅವರಿಗೆ ಭೂಮಿ-ಕಾಣಿ ಇರುವುದಿಲ್ಲ. ಗುಡಿಸಲು ಇವರ ಮನೆ. ಮಾಲೀಕರಿಗೆ ಆಸ್ತಿ-ಅಂತಸ್ತು ಅಧಿಕಾರ ಇರುತ್ತದೆ. ಅವರದು ಪ್ರಧಾನವರ್ಗ. ಕೆಳಜಾತಿಗೆ ಸೇರಿದ ಕೂಲಿಕಾರರದು ಅಧೀನ ಸ್ಥಿತಿ. ಅವರಿಗೆ ಆಸ್ತಿ-ಪಾಸ್ತಿ ಇರುವುದಿಲ್ಲ.

ಉಪಸಂಹಾರ

ಹಲವಾರು ವಿಧದ ಮಾರುಕಟ್ಟೆಗಳಿವೆ. ಆದರೆ, ಅಲ್ಲಿ ಸಮಸ್ಯೆ ಮಾತ್ರ ಒಂದೆ! ಮಾರುಕಟ್ಟೆಯಲ್ಲಿ ಪ್ರಧಾನರು ಯಾರು? ಅಧೀನರು ಯಾರು? ಮಾರುಕಟ್ಟೆಯಲ್ಲಿ ಸಮತೋಲನ ಇರುತ್ತದೆ ಎಂದು ಪಾಠ ಹೇಳಲಾಗುತ್ತದೆ. ಆದರೆ ವಾಸ್ತವ ಲೋಕದಲ್ಲಿ ಸ್ಥಿತಿ ಬೇರೆ ಇದೆ. ಕೃಷಿ ಮಾರುಕಟ್ಟೆಯಲ್ಲಿ ದಲ್ಲಾಳಿಗಳು ಪ್ರಧಾನರು. ಲೇವಾದೇವಿಗಾರರು ಪ್ರಧಾನರು. ಭೂಮಾಲೀಕರು ಪ್ರಧಾನರು. ಆದರೆ ಸಣ್ಣಪುಟ್ಟ ರೈತರು, ಗೇಣಿದಾರರು, ಹೆಂಗಸರು ಅಧೀನ ಸ್ಥಿತಿಯಲ್ಲಿದ್ದಾರೆ.

ದುಡಿಮೆಯ ಮಾರುಕಟ್ಟೆಯಲ್ಲಿ ಮಾಲೀಕರು ಪ್ರಧಾನರು. ಕೂಲಿಕಾರರು ಅಧೀನ-ಪರಾಧೀನ ಸ್ಥಿತಿಯಲ್ಲಿದ್ದಾರೆ. ಇದೊಂದು ಅಸಮ ಸ್ಥಿತಿ. ಅಸಮ ವಿನಿಮಯ. ಇಲ್ಲಿ ಬಡವರು, ರೈತರು, ಕೂಲಿಕಾರರು ತುಳಿತಕ್ಕೆ, ದಬ್ಬಾಳಿಕೆಗೆ ಒಳಗಾಗಿದ್ದಾರೆ. ಮಾರುಕಟ್ಟೆಯು ಉಳ್ಳವರ ಪರವಾಗಿರುತ್ತದೆ.

ಆದ್ದರಿಂದ ಸರ್ಕಾರ ಅದನ್ನು ನಿಯಂತ್ರಿಸಬೇಕು. ಮಾರುಕಟ್ಟೆಯ ಮೇಲೆ ಸರ್ಕಾರದ ಅಂಕುಶವಿರಬೇಕು. ಇಂದು ಮಾರುಕಟ್ಟೆ ಪರವಾಗಿ ನೀತಿಗಳು ಜಾರಿಗೆ ಬರುತ್ತಿವೆ. ಮಾರುಕಟ್ಟೆಯನ್ನು ಹಾಡಿ ಹೊಗಳಲಾಗುತ್ತಿದೆ. ಆದರೆ ಮಾರುಕಟ್ಟೆಯ ಜೊತೆ ಕೂಲಿಕಾರರ ಸಂಬಂಧ, ಭೂರಹಿತ ಕಾರ್ಮಿಕರ ಸಂಬಂಧ ವಿಷಮವಾಗಿದೆ. ಅದು ಸರಿಯಾಗ ಬೇಕಾದರೆ ಸರ್ಕಾರವು ಮಾರುಕಟ್ಟೆಯನ್ನು ನಿಯಂತ್ರಿಸಬೇಕು. ಇಂದು ಎಲ್ಲರೂ ಮುಕ್ತ ಮಾರುಕಟ್ಟೆ ಬಗ್ಗೆ ಮಾತಾಡುತ್ತಿದ್ದಾರೆ. ಆದರೆ ಮಾರುಕಟ್ಟೆಯು ತನ್ನಷ್ಟಕ್ಕೆ ತಾನೇ ನಿರುದ್ಯೋಗವನ್ನು ನಿವಾರಿಸಲಾರದು. ಬಡತನವನ್ನು ನಿವಾರಿಸಲಾರದು. ಬದಲಾಗಿ ಮಾರುಕಟ್ಟೆಯಿಂದ ಬಡತನ-ನಿರುದ್ಯೋಗ-ಹಸಿವು ಹೆಚ್ಚಾಗಬಹುದು.

ಮಾರುಕಟ್ಟೆ ಬೇಕು. ಆದರೆ ಅದರ ಮೇಲೆ ಸರ್ಕಾರದ ನಿಯಂತ್ರಣವಿರಬೇಕು.

✣ ✣ ✣

ಕನ್ನಡ ವಿಶ್ವವಿದ್ಯಾಲಯವು ನವಸಾಕ್ಷರರಿಗೆ ಮತ್ತು ಪ್ರಾಥಮಿಕ ಹಂತದಿಂದ ಪದವಿ ಮಟ್ಟದವರೆಗೆ ಉತ್ತಮ ಹಾಗೂ ಉಪಯುಕ್ತವಾದ ಪಠ್ಯಪುಸ್ತಕಗಳನ್ನು ನಿರ್ಮಾಣ ಮಾಡುವ ಸಲುವಾಗಿ 'ಪಠ್ಯಪುಸ್ತಕ ರಚನಾ ವಿಭಾಗ'ವನ್ನು ತೆರೆದಿದೆ. ಇದರ ಮೊದಲ ಪ್ರಯತ್ನವಾಗಿ ನವಸಾಕ್ಷರರಿಗಾಗಿ ಪಠ್ಯಪುಸ್ತಕ ರಚನೆ ಮಾಡಬೇಕೆಂದು ಚಿಂತಿಸುತ್ತಿರುವಾಗ ಬೆಂಬಲಕ್ಕೆ ಬಂದುದು ಲೋಕ ಶಿಕ್ಷಣ ಇಲಾಖೆ. ನವಸಾಕ್ಷರರಿಗಾಗಿ ಪುಸ್ತಕ ಬರೆಸುವ ತಮ್ಮಲ್ಲಿದ್ದ ಯೋಜನೆಯನ್ನು ಅವರು ನಮ್ಮ ವಿಶ್ವವಿದ್ಯಾಲಯಕ್ಕೆ ವಹಿಸಿಕೊಟ್ಟರು. ವಿಶ್ವವಿದ್ಯಾಲಯವು ಈ ಯೋಜನೆಯನ್ನು ಸಂತಸದಿಂದ ಸ್ವೀಕರಿಸಿ, ಕೂಡಲೇ ನಾಡಿನ ಪ್ರಖ್ಯಾತ ಲೇಖಕರನ್ನು, ಭಾಷಾತಜ್ಞರನ್ನು, ಶಿಕ್ಷಣತಜ್ಞರನ್ನು ಒಳಗೊಂಡಂತೆ ಸಲಹಾ ಸಮಿತಿಯನ್ನು ರಚಿಸಿ, ಅವರೆಲ್ಲರ ಅಭಿಪ್ರಾಯ, ಸಲಹೆ, ಸಹಕಾರಗಳನ್ನು ಕೇಳಿ ಕಾರ್ಯೋನ್ಮುಖವಾಯಿತು. ಪುಸ್ತಕಗಳ ವಸ್ತು, ಭಾಷೆ, ಮುದ್ರಣ ವಿನ್ಯಾಸ, ಚಿತ್ರಗಳ ಮಹತ್ವ, ಸಾಹಿತ್ಯಕ ಗುಣಮಟ್ಟ ಇತ್ಯಾದಿಗಳನ್ನು ಕುರಿತು ಸಮಿತಿಯು ಅನೇಕ ಸಲ ಚರ್ಚಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸೂಚಿಸಿತು.

ನವಸಾಕ್ಷರರಿಗಾಗಿ ಕನ್ನಡದಲ್ಲಿ ಹಾಗೂ ದೇಶದ ಇತರ ಭಾಷೆಗಳಲ್ಲಿ ಈಗಾಗಲೇ ಪ್ರಕಟವಾಗಿರುವ ಪುಸ್ತಕಗಳನ್ನೆಲ್ಲ ಒಟ್ಟುಗೂಡಿಸಿ, ಅವುಗಳ ಮಾದರಿ, ಮಾಹಿತಿಗಳನ್ನೆಲ್ಲ ಭಾಷಾತಜ್ಞರಿಂದ ಪರಿಶೀಲಿಸಲಾಯಿತು. ಜೊತೆಗೆ ಈ ಕ್ಷೇತ್ರದ ಅನುಭವಿ ಕ್ಷೇತ್ರಸಹಾಯಕರನ್ನು ನೇಮಿಸಿಕೊಂಡು ಅವರಿಗೆ ಕಮ್ಮಟಗಳನ್ನು ನಡೆಸಿ, ಪ್ರಶ್ನಾವಳಿ ತಯಾರಿಸಿಕೊಟ್ಟು, ಅವರನ್ನು ರಾಜ್ಯದಾದ್ಯಂತ ಆಯ್ದ ಜಿಲ್ಲೆ, ತಾಲೂಕುಗಳಿಗೆ ಕಳುಹಿಸಿ ಈ ಆಂದೋಲನದಲ್ಲಿ ಕಲಿತವರಿಂದ ಮತ್ತು ಕಲಿಯುತ್ತಿರುವವರಿಂದ ಆದರ ಗುಣದೋಷಗಳ ಬಗ್ಗೆ ಅಭಿಪ್ರಾಯ ಸಲಹೆಗಳನ್ನು ಸಂಗ್ರಹಿಸಿ, ಅನಂತರ ಅವುಗಳನ್ನೆಲ್ಲ ವಿಶ್ವವಿದ್ಯಾಲಯದ ಗಣಕಯಂತ್ರದಲ್ಲಿ ವಿಶ್ಲೇಷಿಸಲಾಯಿತು; ಮತ್ತೆ ಮತ್ತೆ ಕ್ಷೇತ್ರಗಳಿಗೆ ಹೋಗಿ, ಕ್ಷೇತ್ರ ಸಹಾಯಕರು ನೀಡಿದ್ದ ಮಾಹಿತಿಗಳನ್ನೆಲ್ಲ ಮರು ಪರಿಶೀಲನೆ ಮಾಡಿ, ನಂತರ ನವಸಾಕ್ಷರರ ಅಪೇಕ್ಷೆಗೆ ಅನುಗುಣವಾಗಿ ವಿಷಯದ ಆದ್ಯತೆಗಳನ್ನು ನಿರ್ಧರಿಸಿಕೊಂಡು ಪುಸ್ತಕ ರಚನೆಗೆ ತೊಡಗಲಾಯಿತು; ಪ್ರಖ್ಯಾತ ಲೇಖಕರು ನಮ್ಮ ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಜೊತೆ ಚರ್ಚಿಸಿ ತಮ್ಮ ಹಸ್ತಪ್ರತಿಗಳಿಗೆ ಅಂತಿಮ ರೂಪ ಕೊಟ್ಟರು. ಕಲಾವಿದರು ವಿಷಯಗಳಿಗೊಪ್ಪುವ ಚಿತ್ರಗಳನ್ನು ಬರೆದುಕೊಟ್ಟರು. ಹೀಗೆ ಸಿದ್ಧಗೊಂಡ ಹಸ್ತಪ್ರತಿಗಳನ್ನು ನವಸಾಕ್ಷರರ ಬಳಿ ಕೊಂಡೊಯ್ದು ಅವರ ಮುಂದೆ ಪಠಿಸಿ ನಂತರ ಅವರ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿ ಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು